ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಏಪ್ರಿಲ್ 15, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 334 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50
1974
2023
janathavani@mac.com
www.janathavani.com
08192 254736 91642 99999



# ಹರಿಹರ : ಮಳೆಗಾಗಿ ವಿಶೇಷ ಹೋಮ, ಹವನ ಪೂಜೆ

ಹರಿಹರ, ಏ.14- ಶ್ರೀ ಹರಿಹರೇಶ್ವರ ದೇವಸ್ಥಾನದ ಆವರಣದಲ್ಲಿ ರಾಜ್ಯದಲ್ಲಿ ಮಳೆ, ಬೆಳೆಗಳು ಸಮೃದ್ಧಿಯಾಗಿ, ಜನರು ನೆಮ್ಮದಿ ಜೀವನ ನಡೆಸುವಂತೆ ಶ್ರೀ ಹರಿಹರೇಶ್ವರ ಸ್ವಾಮಿ ಮತ್ತು ಲಕ್ಷ್ಮಿ ದೇವಿಗೆ ವಿಶೇಷ ಹೋಮ, ಹವನ, ಪೂಜಾ ಕಾರ್ಯಗಳು ಇಂದು ನಡೆದು ನಗರದಲ್ಲಿ ಮಳೆಯ ಸಿಂಚನದ ಸ್ಪರ್ಶವಾಗಿದೆ.

ಈ ವೇಳೆ ಪ್ರಧಾನ ಜೋಯಿಸರಾದ ಡಾ ಪಂಡಿತ ನಾರಾಯಣ ಅವರು ಮಾತನಾಡಿ, ಕಳೆದ ನಾಲ್ಕು ದಿನಗಳಿಂದ ಬೆಳಗ್ಗೆಯಿಂದ ಸಂಜೆಯವರಿಗೆ ರಾಜ್ಯದ ಗೋಕರ್ಣ, ಶಿರಸಿ, ಮತ್ತು ಅಂತರರಾಷ್ಟ್ರೀಯ ಮಟ್ಟದ ಮಹಾರಾಷ್ಟ್ರದ ಕೊಲ್ಲಾಪುರ, ಹೈದರಾಬಾದ್ ಸೇರಿದಂತೆ ಇತರೆ ನಗರದ ಸುಮಾರು 130 ಋತ್ವಿಜರು ಅತಿರುದ್ರಾಭಿಷೇಕ, 50 ಋತ್ವಿಜರು ಹೋಮ ಹವನ ಮತ್ತು 15 ಭಟ್ಟರು ಶಾಂತಿಯಾಗ ಸೇರಿದಂತೆ ವಿವಿಧ ಪೂಜಾ ಕಾರ್ಯಗಳನ್ನು ಮಾಡಿದರು.



ನಂತರ ಶ್ರೀ ಹರಿಹರೇಶ್ವರ ಸ್ವಾಮಿಗೆ ಮತ್ತು ಲಕ್ಷ್ಮೀ ದೇವಿಗೆ ವಿಶೇಷ ಅಲಂಕಾರ

ಮಹಾಮಂಗಳಾರತಿ ಮಾಡಿ ನಂತರ ಪ್ರಸಾರ ವಿನಿಯೋಗ ಸೇರಿದಂತೆ ಸಂಜೆ ಮನೋರಂಜನಾ ಕಾರ್ಯಕ್ರಮಗಳನ್ನು ಮಾಡಲಾಗಿದೆ. ಸುಮಾರು 32 ಕ್ಕೂ ಹೆಚ್ಚು ಹೋಮ, ಹವನ ಮಾಡಲಾಗಿದೆ ಎಂದು ಹೇಳಿದರು.

ಅದರಲ್ಲಿ ವಿಶೇಷವಾಗಿ ಮಳೆಗಾಗಿ ಸಂಜೀವ ಶಾಸ್ತ್ರೀಯವರ ತಂಡವು ಪರ್ಜನ್ಯ ಹೋಮ, ಮಹಾರಾಷ್ಟ್ರದ ಸುದರ್ಶನ ಗುರೂಜಿ, ಹೈದರಾಬಾದ್ ನ ಸುರೇಶ್ ಭಟ್ ರವರಿಂದ ಹೋಮ ಹವನ, ಪಂಡಿತ ನಾರಾಯಣ ಜೋಯಿಸರು, ಚಿದಂಬರ ಜೋಯಿಸರು ಹರಿಶಂಕರ್ ಜೋಯಿಸರು, ಲಕ್ಷ್ಮೀಕಾಂತ್ ಜೋಯಿಸರು ದೀಕ್ಷಿತ್ ಗುರೂಜಿ ಗೋಕರ್ಣ, ಜಿಗಳೇಕರ್ ಕೊಲ್ಲಾಪುರ ರವರಿಂದ ಅತಿರುದ್ರಾಭಿಷೇಕ, ಬಲ್ವಾರ್ಚನೆ ಶ್ರೀ ಹರಿಹರೇಶ್ವರ ದೇವಾಲಯದ ಪ್ರಧಾನ ಅರ್ಚಕರು ಶ್ರೀನಿವಾಸ್ ಮೂರ್ತಿ, ಗುರುಪ್ರಸಾದ್ ರವರು ದೇವರಿಗೆ ಅಲಂಕಾರ, ಮಹಾಮಂಗಳಾರತಿ ಮಾಡಿದರು.

ಪೂಜಾ ಕಾರ್ಯಗಳನ್ನು ನಗರದಲ್ಲಿ ನಡೆಸುತ್ತಾ ಇರುವುದರಿಂದ ಈಗಾಗಲೇ ನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳ ವಾತಾವರಣದಲ್ಲಿ ಬದಲಾವಣೆ ಕಂಡು, ಮಳೆ ಬೀಳುವ ಲಕ್ಷಣಗಳನ್ನು ಕಾಣಬಹುದಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹರಿಶಂಕರ್ ಜೋಯಿಸರು, ಚಿದಂಬರ ಜೋಯಿಸರು, ಸುದರ್ಶನ ಗುರೂಜಿ ಮಹಾರಾಷ್ಟ್ರ, ಸುರೇಶ್ ಭಟ್ ಹೈದರಾಬಾದ್, ಬಾಲಚಂದ್ರ ದೀಕ್ಷಿತ್ ಸೋಮಯಾಜಿ ಗೋಕರ್ಣ, ಚಿದಂಬರ ಜೋಯಿಸರು, ವಿಶ್ವನಾಥ್ ಶಾಸ್ತ್ರಿ, ವಿದ್ಯಾನಾಥ್ ಶಾಸ್ತ್ರಿ, ಲಕ್ಷ್ಮೀ ಕಾಂತ್ ಜೋಯಿಸರು, ವಿಜೇಯಂದ್ರ ಶಾಸ್ತ್ರಿ, ಶಂಕರ್ ದೇಸಾಯಿ, ಅನಂತನಾಯ್ಕ್, ಶ್ರೀಧರ್ ಮೂರ್ತಿ, ರಾಘವ್ ಗುರುಪ್ರಸಾದ್, ಸುಧನ್ವ ಆಚಾರ್, ಶಂಕರ್ ಪ್ರಸಾದ್ ಜಡೆ, ರಾಮೇಶ್ ಭಟ್, ವಾರಿಜಾ ವೆಂಕಟೇಶ್ ಇತರರು ಉಪಸ್ಥಿತರಿದ್ದರು.

# ವದಂತಿಗಳಿಗೆ ಕಿವಿಗೊಡಬೇಡಿ, ನಾನು ಮೋದಿ ಅನುಯಾಯಿ

## ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್



ಹರಿಹರ, ಏ.14- ಬಿಜೆಪಿ ತೊರೆದು ಕಾಂಗ್ರೆಸ್ ಸೇರುತ್ತಾರೆ ಎಂಬುದು ಶುದ್ಧ ಸುಳ್ಳು, ಇಂತಹ ವದಂತಿಗಳನ್ನು ಯಾರು ನಂಬಬೇಡಿ ಎಂದು ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ತಿಳಿಸಿದರು.


ಜನತಾವಾಣಿಯೊಂದಿಗೆ ಮಾತನಾಡಿದ ಅವರು, ಬಿಜೆಪಿ ಸೇರಿದ ನಂತರ ನನ್ನ ಸಾಮಾಜಿಕ ಸೇವೆ ಗಮನಿಸಿ ಕ್ಷೇತ್ರದ ಜನರೇ ಶಾಸಕ ಆಗುವಂತೆ ಒತ್ತಾಯಿಸಿದ್ದರು. ಆದರೆ ಪಕ್ಷದ ಹಿರಿಯರು ಬಿ.ಪಿ. ಹರೀಶ್ ಅವರಿಗೆ ಟಿಕೆಟ್ ಕೊಡಿಸಿದಾಗಲೂ ವಿಚಲಿತನಾಗದೇ, ಪಕ್ಷದ ಸೇವೆ ಮಾಡಿ ಹರೀಶರನ್ನು ಗೆಲ್ಲಿಸಿದ್ದೆವು ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರ ಮೆಚ್ಚಿ ನಾನು ಬಿಜೆಪಿಗೆ ಸೇರಿದ್ದೇನೆ. ಆದ್ದರಿಂದ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿಯಾಗಿಸುವ ದೃಷ್ಟಿಯಿಂದ ಗಾಯತ್ರಿ ಸಿದ್ದೇಶ್ವರರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸುವ ನಿಟ್ಟಿನಲ್ಲಿ ನಾನು, ಜನಾಕರ್ಷಿಸುವುದನ್ನು ಕೆಲವರಿಗೆ ಸಹಿಸಲಾಗುತ್ತಿಲ್ಲ ಎಂದರು.

ನನ್ನ ಕಾರ್ಯ ಚಟುವಟಿಕೆ ಸಹಿಸದ ಕೆಲವರು, ಬಿಜೆಪಿ ಮತ್ತು ಜೆಡಿಎಸ್ ಪಕ್ಷ ಒಂದುಗೂಡಿ ಪ್ರಚಾರ ನಡೆಸುತ್ತಿರುವುದರಿಂದ ಚಂದ್ರಶೇಖರ್ ಪೂಜಾರ್ ಅವರಿಗೆ ಪಕ್ಷದಲ್ಲಿ ಸರಿಯಾದ ಮಾನ್ಯತೆ ಸಿಗುತ್ತಿಲ್ಲ. ಆದ್ದರಿಂದ ಕಾಂಗ್ರೆಸ್ ಪಕ್ಷಕ್ಕೆ ಸೇರಲು ಚಿಂತನೆ ನಡೆಸಿದ್ದಾರೆ ಎಂದು ಸುಳ್ಳು ವದಂತಿ ಹಬ್ಬಿಸುತ್ತಿದ್ದಾರೆ ಎಂದು ದೂರಿದರು.

ನಾನು ಅಪ್ಪಟ ಮೋದಿ ಅವರ ಅಭಿಮಾನಿ, ದೇಶದಲ್ಲಿ ಮತ್ತೊಮ್ಮೆ ಮೋದಿಜೀ ಪ್ರಧಾನಿಯಾಗಬೇಕು ಮತ್ತು ಅವರು ಕಂಡ ಕನಸಿಗೆ ಪೂರಕವಾಗಿ ಪಕ್ಷದಲ್ಲಿ ಶಿಸ್ತಿನ ಸಿಪಾಯಿಯಂತೆ ಬಿಜೆಪಿಗೆ ಬದ್ಧನಾಗಿ ಲೋಕಸಭಾ ಚುನಾವಣೆಯಲ್ಲಿ ಕೆಲಸ ಮಾಡುತ್ತಿರವುದಾಗಿ ಹೇಳಿದರು.

## ಕುಡಿಯುವ ನೀರಿಗಾಗಿ ತುಂಗಭದ್ರೆಯಲ್ಲಿ ತಾತ್ಕಾಲಿಕ ತಡೆಗೋಡೆ ನಿರ್ಮಾಣ



ರಾಣೇಬೆನ್ನೂರು

ರಾಣೇಬೆನ್ನೂರು,ಏ.14- ರಾಣೇಬೆನ್ನೂರು ನಗರಸಭೆ ಮತ್ತು ಬ್ಯಾಡಗಿ ಪುರಸಭೆ ಸೇರಿ ಹತ್ತು ಲಕ್ಷ ಅನುದಾನದಲ್ಲಿ ತಾಲ್ಲೂಕಿನ ಮುದೇನೂರ ಬಳಿ ತುಂಗಭದ್ರಾ ನದಿಗೆ ಅಡ್ಡಲಾಗಿ ಮರಳಿನ ಚೀಲಗಳಿಂದ ತಾತ್ಕಾಲಿಕ ತಡೆಗೋಡೆ ನಿರ್ಮಿಸಿ ಎರಡು ತಿಂಗಳುಗಳಿಗೆ ಆಗುವಷ್ಟು ಕುಡಿಯುವ ನೀರು ಸಂಗ್ರಹಿಸಲಾಗಿದೆ ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

350 ಅಡಿ ಉದ್ದ, 20 ಅಡಿ ತಳಪಾಯ ಮತ್ತು 15 ಅಡಿ ಎತ್ತರದ ತಡೆಗೋಡೆ ಇದಾಗಿದ್ದು ರಾಣೇಬೆನ್ನೂರು ನಗರ ಹಾಗೂ ಬ್ಯಾಡಗಿ ಪಟ್ಟಣಗಳಿಗೆ ಎರಡು ತಿಂಗಳು ಕುಡಿಯುವ ನೀರಿನ ತೊಂದರೆ ಆಗಲಾರದು ಎಂದು ಅಧಿಕಾರಿಗಳು ನಂಬುಗೆ ವ್ಯಕ್ತಪಡಿಸಿದ್ದಾರೆ.

ಮುಂಗಾರು ಕೊರತೆಯಿಂದ ತಾಲ್ಲೂಕಿನಲ್ಲಿ ಹರಿಯುತ್ತಿರುವ ತುಂಗಭದ್ರಾ ಹಾಗೂ ಕುಮದ್ವತಿ ನದಿಗಳಲ್ಲಿ ನೀರು ಸಂಪೂರ್ಣ ಬರಿದಾಗಿದ್ದು, ನಗರ ಮತ್ತು ಕೆಲ ಗ್ರಾಮಗಳ ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಉಂಟಾಗಿದ್ದನ್ನು ಮನಗಂಡ ಶಾಸಕ ಪ್ರಕಾಶ ಕೋಳಿವಾಡ ಹಾಗೂ ಬಸವರಾಜ ಶಿವಣ್ಣನವರ ಅವರುಗಳು ಸರ್ಕಾರದ ಗಮನಕ್ಕೆ ತಂದು ಭದ್ರಾ ಅಣೆಕಟ್ಟೆಯಿಂದ ಎರಡು ಟಿಎಂಸಿ ನೀರು ಹರಿಸಿದ್ದರು.

## ಶ್ಯಾಮ್ ನೇತೃತ್ವದಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆ



ದಾವಣಗೆರೆ, ಏ. 14 - ಮಾಯಕೊಂಡ ಕ್ಷೇತ್ರದ ಗೊಲ್ಲರಹಳ್ಳಿ ಗ್ರಾಮದಲ್ಲಿ ಭಾನುವಾರ ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಬಿಜೆಪಿ ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಜಿ.ಎಸ್ ಶ್ಯಾಮ್ ನೇತೃತ್ವದಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಯಾದರು.

ಈ ವೇಳೆ ಮಾತನಾಡಿದ ಜಿ.ವಿ. ಶೇಖರಪ್ಪ ಗೊಲ್ಲರಹಳ್ಳಿ ಎಸ್ಸಿ, ಎಸ್ಟಿ ಸಮಾಜದವರಿಗೆ ಯಾವುದೇ ಅನುಕೂಲ ಮಾಡಿಕೊಡಲಿಲ್ಲ, ಕೇವಲ ಮತಕ್ಕೆ ಮಾತ್ರ ಸೀಮಿತ ಮಾಡಿದರು. ಇದರಿಂದ ಬೇಸತ್ತು ಬಿಜೆಪಿ ಸೇರ್ಪಡೆಗೊಂಡಿದ್ದೇವೆ ಎಂದರು. ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಬಿಜೆಪಿ ಸೇರಿದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ನಾಗಪ್ಪ, ಸಂಸದ ಜಿ. ಎಂ.ಸಿದ್ಧೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಶಾಸಕ ಪ್ರೊ. ಲಿಂಗಣ್ಣ, ಬಸವರಾಜ್ ನಾಯಕ್, ಹನುಮಂತ ನಾಯಕ, ಬಿ.ಟಿ ಸಿದ್ದಪ್ಪ ಸೇರಿದಂತೆ ಬಿಜೆಪಿ ಮುಖಂಡರ ಸಮ್ಮುಖದಲ್ಲಿ ಜಿ.ಹೇಮಣ್ಣ, ರಾಜು, ಬಸವರಾಜು, ಚಂದ್ರಪ್ಪ, ರಮೇಶ್, ಗೋವಿಂದ್, ಶಂಕ್ರಪ್ಪ, ತಿಮ್ಮಣ್ಣ, ನಾಗೇಂದ್ರಪ್ಪ, ಗಣೇಶ್, ದೊಡ್ಮನೆ ವೆಂಕಟೇಶ್, ದೊಡ್ಡಹಟ್ಟಿ ತಿಮ್ಮಣ್ಣ, ನಂಜುಂಡಿ, ಗಂಗಪ್ಪ, ಮೂರ್ತೆಪ್ಪ, ಶೇಖರಪ್ಪ ಸೇರಿದಂತೆ ಗ್ರಾಮದ ಮುಖಂಡರು ಬಿಜೆಪಿಗೆ ಸೇರ್ಪಡೆಯಾದರು.

## 'ತುಕ್ಡೇ ತುಕ್ಡೇ ಗ್ಯಾಂಗ್‌ನ ಸುಲ್ತಾನ'

(5ನೇ ಪುಟದಿಂದ) ಕರ್ನಾಟಕದ ಜನತೆ ನೋಡಿದ್ದಾರೆ. ಈ ರೀತಿ ಮಾತನಾಡುವವರಿಗೆ ಕಾಂಗ್ರೆ ಸ್ ಲೋಕಸಭಾ ಚುನಾವಣಾ ಟಿಕೆಟ್ ನೀಡುತ್ತದೆ ಎಂದು ಮೋದಿ ಹೇಳಿದರು. ಪರೋಕ್ಷವಾಗಿ ಅವರು ಬೆಂಗಳೂರು ಗ್ರಾಮಾಂತರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಅವರ ಹೇಳಿಕೆಗಳನ್ನು ಪ್ರಸ್ತಾಪಿಸಿದ್ದರು.

ಅಧಿಕಾರಕ್ಕಾಗಿ ಕಾಂಗ್ರೆಸ್ ಪಕ್ಷ ಬೆಂಕಿಯ ಜೊತೆ ಸರಸವಾಡುತ್ತಿದೆ. ಭಾರತದ ಸ್ಥಾನಮಾನ ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿದೆ. ಈ ಹಂತದಲ್ಲಿ ಭಾರತವನ್ನು ಕೀಳಾಗಿ ಕಾಣುವ ಯಾವುದೇ ಅವಕಾಶವನ್ನು ಕಾಂಗ್ರೆಸ್ ಬಿಡುತ್ತಿಲ್ಲ ಎಂದವರು ಆರೋಪಿಸಿದರು.

ಭಾರತ ತನ್ನ ಶತ್ರುಗಳಿಗೆ ತಕ್ಕ ಉತ್ತರ ನೀಡುತ್ತದೆ. ಆದರೆ, ಕಾಂಗ್ರೆಸ್ ಪಕ್ಷ ಸೈನ್ಯದಿಂದ ಸರ್ಜಿಕಲ್ ದಾಳಿಗೆ ಸಾಕ್ಷಿ ಕೇಳುತ್ತದೆ. ಉಗ್ರವಾದಿ ಸಂಘಟನೆಯ ರಾಜಕೀಯ ವಿಭಾಗದ ಜೊತೆ ಕಾಂಗ್ರೆಸ್ ಕೆಲಸ ಮಾಡುತ್ತಿದೆ ಎಂದೂ ಅವರು ಆರೋಪಿಸಿದರು.

ಅಯೋಧ್ಯೆಯ ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆಗೆ ಕಾಂಗ್ರೆಸ್ ಹಾಗೂ ಐ.ಎನ್. ಡಿ.ಐ.ಎ. ಮೈತ್ರಿಕೂಟ ಬಹಿಷ್ಕಾರ ಹಾಕಿತ್ತು. ಆಹ್ವಾನ ಪತ್ರ ತಿರಸ್ಕರಿಸಿತ್ತು. ಇದು ನಮ್ಮ ನಂಬಿಕೆಗಳಿಗೆ ಮಾಡಿದ ಅವ ಮಾನ ಎಂದೂ ಮೋದಿ ತರಾಟೆಗೆ ತೆಗೆದುಕೊಂಡರು.

ಐ.ಎನ್.ಡಿ.ಐ.ಎ. ಒಕ್ಕೂಟದವರು ಸನಾತನ ಧರ್ಮ ನಿರ್ಮೂಲನೆ ಮಾಡಲು ಹಾಗೂ ಹಿಂದೂ ಧರ್ಮದ ಶಕ್ತಿಯನ್ನು ನಾಶ ಮಾಡಲು ಬಯಸಿದ್ದಾರೆ. ಮೋದಿ ಇರುವವರೆಗೂ ಹಾಗೂ ನಿಮ್ಮ ಆಶೀರ್ವಾದ ಇರುವವರೆಗೂ ಈ ಪ್ರಯತ್ನ ಎಂದೂ ಯಶಸ್ವಿಯಾಗುವುದಿಲ್ಲ. ಇದು ಮೋದಿ ಗ್ಯಾರಂಟಿ ಎಂದವರು ಹೇಳಿದರು.

ಈ ಸಮಾವೇಶದಲ್ಲಿ ಮಾತನಾಡಿದ ಮಾಜಿ ಪ್ರಧಾನ ಮಂತ್ರಿ ಹಾಗೂ ಜೆಡಿಎಸ್ ವರಿಷ್ಠ ದೇವೇಗೌಡ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

## ಚೀಲೂರಲ್ಲಿ ಇಂದು ಗಜಾರೋಹಣ

ನ್ಯಾಮತಿ ತಾಲ್ಲೂಕಿನ ಚೀಲೂರು ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಈಶ್ವರ ದೇವಾಲಯದ ಪ್ರವೇಶೋತ್ಸವ, ಕಳಸಾರೋಹಣ, ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಲಕ್ಷ್ಮಿರಂಗನಾಥ ಸ್ವಾಮಿ ಕೆಂಡದಾರ್ಚನೆ ಹಾಗೂ ರಥೋತ್ಸವ ಕಾರ್ಯಕ್ರಮಗಳು ಇಂದಿನಿಂದ ಇದೇ ದಿನಾಂಕ 17 ರವರೆಗೆ ಜರುಗಲಿವೆ. ಇಂದು ಗಜಾರೋಹಣ ಮಹೋತ್ಸವ ಜರುಗಲಿವೆ. ನಾಳೆ ಮಂಗಳವಾರ ಬೆಳಿಗ್ಗೆ 5 ಕ್ಕೆ ಶ್ರೀ ಸ್ವಾಮಿಯ ರುದ್ರಾಭಿಷೇಕ, ಕೆಂಡದಾರ್ಚನೆ, ನಾಗದೇವರ ಪೂಜೆ, ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಧೂಳ್ ಅರ್ಚನೆ ಕಾರ್ಯಕ್ರಮಗಳು ನಡೆಯಲಿವೆ. ದಿನಾಂಕ 17 ರ ಬುಧವಾರ ಬೆಳಿಗ್ಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವ, ಸಂಜೆ ಓಕುಳಿ ನಡೆಯಲಿವೆ.

## ಕೊಡಗನೂರಿನಲ್ಲಿ ನಾಡಿದ್ದು ಆಂಜನೇಯ ಸ್ವಾಮಿ ರಥ



ದಾವಣಗೆರೆ, ಏ. 14- ತಾಲ್ಲೂಕಿನ ಕೊಡಗನೂರಿನಲ್ಲಿ ಪ್ರಸಿದ್ಧ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಇದೇ ದಿನಾಂಕ 17ರ ಬುಧವಾರ ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ.


## ಸರಬ್‌ಜಿತ್ ಹತ್ಯೆಯಲ್ಲಿ ಭಾಗಿಯಾಗಿದ್ದವನ ಸಾವು

ನವದೆಹಲಿ, ಏ. 14 – ಪಾಕಿಸ್ತಾನದಲಿ ಮರಣದಂಡನೆಗೆ ಗುರಿಯಾಗಿದ್ದ ಸರಬ್‌ಜಿತ್ ಸಿಂಗ್ ಹತ್ಯೆಗೈದಿದ್ದ ವ್ಯಕ್ತಿಯನ್ನು ಲಾಹೋರ್‌ನಲ್ಲಿ ಹತ್ಯೆ ಮಾಡಲಾಗಿದೆ.

ಅಮೀರ್ ಸರ್‌ಫರಾಜ್ ಟಂಬ ಎಂಬಾತನನ್ನು ಮೋಟರ್ ಸೈಕಲ್‌ನಲ್ಲಿ ಬಂದ ಹಂತಕರು ಗುಂಡಿನ ದಾಳಿ ನಡೆಸಿ ಹೊಡೆದುರುಳಿಸಿದ್ದಾರೆ. ಟಂಬ ಲಷ್ಕರ್ ಎ ತೊಯ್ಬಾ ಉಗ್ರವಾದಿ ಸಂಘಟನೆಯ ಸ್ಥಾಪಕ ಹಫೀಜ್ ಸಯೀದ್ ನಿಕಟವರ್ತಿ.

ಬಿಗಿ ಭದ್ರತೆಯ ಕೋಟ್ ಲಖಪತ್ ಜೈಲಿನಲ್ಲಿ ಸರಬ್‌ಜಿತ್ ಮೇಲೆ ಟಂಬ ಸೇರಿದಂತೆ ಹಲವರು ತೀವ್ರ ಹಲ್ಲೆ ನಡೆಸಿದ್ದರು. ನಂತರ ಅವರು ಮೇ 2, 2013ರಲ್ಲಿ ಸಾವನ್ನಪ್ಪಿದ್ದರು.

## ಜ್ಯೋತಿಷಿ ಎಸ್.ಕೆ. ಜೈನ್ ನಿಧನ



ದಾವಣಗೆರೆ, ಏ. 14 - ಖ್ಯಾತ ಜ್ಯೋತಿಷಿ ಎಸ್.ಕೆ. ಜೈನ್ ಅವರು ಮೊನ್ನೆ ನಿಧನರಾಗಿದ್ದು, ಜ್ಯೋತಿಷ್ಯದ ಧ್ರುವ ತಾರೆಯಂತೆ ಮಿನುಗಿ ಮಾಯವಾಗಿರುವುದು ಜ್ಯೋತಿಷ್ಯ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದ ನಗರದ ಜ್ಯೋತಿಷಿ ಸಿ. ಕೆ. ಆನಂದತೀರ್ಥಾಚಾರ್ ಸಂತಾಪ ಸೂಚಿಸಿದ್ದಾರೆ.

1998 ಜನವರಿ 9 ಮತ್ತು 10 ರಂದು ದಾವಣಗೆರೆಯಲ್ಲಿ ನಡೆದ ಜ್ಯೋತಿಷ್ಯ ಸಮ್ಮೇಳನದಲ್ಲಿ ಎಸ್.ಕೆ. ಜೈನ್ ಭಾಗವಹಿಸಿದ್ದರು. ಅವರು ಬರೆಯುತ್ತಿದ್ದ ಕಾಲಚಕ್ರ ಪಂಚಾಂಗ ಬಹಳ ಉಪಯೋಗವಾಗಿತ್ತು ಎಂದು ಆನಂದತೀರ್ಥಾಚಾರ್ ತಿಳಿಸಿದ್ದಾರೆ.

## ಕಂದಗಲ್ಲು : ನಾಡಿದ್ದು ರಥೋತ್ಸವ

ದಾವಣಗೆರೆ, ಏ. 14 - ತಾಲ್ಲೂಕಿನ ಕಂದಗಲ್ಲು ಗ್ರಾಮದಲ್ಲಿ ನಾಳೆ ದಿನಾಂಕ 15 ರಿಂದ 18ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಶ್ರೀ ಆಂಜನೇಯ ಸ್ವಾಮಿಯ ನೂತನ ರಥ ಹಾಗೂ ಶ್ರೀ ವೀರಭದ್ರೇಶ್ವರ ಸ್ವಾಮಿ ರಥದ ನೂತನ ಚಕ್ರಗಳ ಉದ್ಘಾಟನೆ, ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಹೆಬ್ಬಾಳು ಶ್ರೀ ರುದ್ರೇಶ್ವರ ವಿರಕ್ತ ಮಠದ ಮಹಾಂತ ರುದ್ರೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ನಡೆಯಲಿವೆ.

ನಾಳೆ ದಿನಾಂಕ 15ರ ಸೋಮವಾರ ಮಧ್ಯಾಹ್ನ 3ಕ್ಕೆ ಹಾಲು ತುಪ್ಪದ ಚರಗ, ರಾತ್ರಿ 10ಕ್ಕೆ ಗ್ರಾಮದ ಸಕಲ ದೇವರುಗಳು ಗಂಗೆ ಪೂಜೆಗೆ ಹೋಗಲಿವೆ. 16ರ ಮಂಗಳವಾರ ಬೆಳಗಿನ ಜಾವ 2ಕ್ಕೆ ದೇವರುಗಳ ಗ್ರಾಮ ಪ್ರದಕ್ಷಿಣೆ, ನಂತರ ಬ್ರಾಹ್ಮೀ ಮುಹೂರ್ತದಲ್ಲಿ ರುದ್ರಾಭಿಷೇಕ, ಹೋಮ, ಶ್ರೀಗಳಿಂದ ಶ್ರೀ ಆಂಜನೇಯ ಸ್ವಾಮಿ ನೂತನ ರಥದ ಕಳಸಾರೋಹಣ, ಶ್ರೀ ವೀರಭದ್ರೇಶ್ವರ ಸ್ವಾಮಿ ನೂತನ ಕಲ್ಲಿನ ಚಕ್ರಗಳ ಹಾಗೂ ನೂತನ ಅಗ್ನಿಕೊಂಡದ ಉದ್ಘಾಟನೆ ನಡೆಯಲಿದೆ. ಬೆಳಿಗ್ಗೆ 11ಕ್ಕೆ ಮಹಾದಾಸೋಹ, ಸಂಜೆ 7.30ಕ್ಕೆ ಉಚ್ಚಾಯ ರಥೋತ್ಸವ ನಡೆಯಲಿದೆ.

17ರ ಬುಧವಾರ ರಾಮ ನವಮಿಯಂದು ಬೆಳಿಗ್ಗೆ 10.30ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ನಡೆಯಲಿದ್ದು, ಮಧ್ಯಾಹ್ನ 12.30ಕ್ಕೆ ಕೆಂಡಾರ್ಚನೆ ನಡೆಯಲಿದೆ. 18ರ ಗುರುವಾರ ಸಂಜೆ 4ಕ್ಕೆ ಓಕಳಿ ನಂತರ ದೇವರುಗಳ ಪ್ರದಕ್ಷಿಣೆ ನಡೆಯಲಿದೆ.

## 'ಕನ್ನಡ ರತ್ನ' ಪ್ರಶಸ್ತಿಗೆ ಅರ್ಜಿ ಆಹ್ವಾನ

ಹರಪನಹಳ್ಳಿ, ಏ.14 - ಪಟ್ಟಣದ ನವ ಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆಯಿಂದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 95 ಕ್ಕೂ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆ ಆದ ವಿದ್ಯಾರ್ಥಿಗಳಿಗೆ 'ಕನ್ನಡ ರತ್ನ' ಪ್ರಶಸ್ತಿ ನೀಡಿ ಗೌರವಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿ ಸಲು ಇದೇ ದಿನಾಂಕ 20 ಕೊನೆಯ ದಿನ ವಾಗಿದೆ. ವಿವರಕ್ಕೆ ಸಂಪರ್ಕಿಸಿ ಸಪ್ನ ಮಲ್ಲಿ ಕಾರ್ಜುನ, ಅಧ್ಯಕ್ಷರು, ನವಜ್ಯೋತಿ ಸೌಹಾರ್ದ ಬ್ಯಾಂಕ್, ಬಸಮ್ಮ ನಿಲಯ, ಗೊರವಿನ ತೋಟ, ವಿಜಯಲಕ್ಷ್ಮಿ ಗ್ಯಾಸ್ ಏಜೆನ್ಸಿ ಹತ್ತಿರ, ಹರಪನಹಳ್ಳಿ. ಹೆಚ್ಚಿನ ಮಾಹಿತಿಗಾಗಿ 7795966081, 7899073268.

## ಹರಿಹರದಲ್ಲಿ ಇಂದಿನಿಂದ ಬೇಸಿಗೆ ಶಿಬಿರ

ಜೆ.ಸಿ. ಬಡಾವಣೆಯಲ್ಲಿರವ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಇಂದಿನಿಂದ ಇದೇ ದಿನಾಂಕ 28 ರವರೆಗೆ ಶಕ್ತಿಶಾಲಿ ವ್ಯಕ್ತಿತ್ವ ನಿರ್ಮಾಣ ಬೇಸಿಗೆ ಶಿಬಿರ ನಡೆಯಲಿದೆ. ಧ್ಯಾನ, ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳುವ ಸುಲಭ ಉಪಾಯ, ಮಕ್ಕಳ ಬೌದ್ಧಿಕ ಸಾಮರ್ಥ್ಯ ಹೆಚ್ಚಿಸಲು ಯೋಗ, ಪ್ರಾಣಾಯಾಮ, ಕ್ರಾಫ್ಟ್, ಚಿತ್ರಕಲೆ, ಸಂಗೀತ ಇತ್ಯಾದಿ ವಿಷಯಗಳನ್ನು ಹೇಳಿ ಕೊಡಲಾಗು ವುದು ವಿವರಕ್ಕೆ ಸಂಪರ್ಕಿಸಿ : 9482925858.

## ಕಣದಿಂದ ಹಿಂದಕ್ಕೆ : ಕಾಂಗ್ರೆಸ್ ಮುಖಂಡರ ಆಹ್ವಾನ ತಿರಸ್ಕಾರ

(5ನೇ ಪುಟದಿಂದ) ಸ್ವೀಕರಿಸುತ್ತೇನೆ ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಹೆಚ್. ಎಂ. ರೇವಣ್ಣ ಅವರು ಮನೆಗೆ ಆಗಮಿಸುತ್ತಿದ್ದಂತೆ ನಗುಮೊಗದಿಂದಲೇ ಸ್ವಾಗತಿಸಿದ ವಿನಯ್ ಕುಮಾರ್ ಜೊತೆ ಕಾಂಗ್ರೆಸ್ ನಿಯೋಗವು ಮಾತುಕತೆ ನಡೆಸಿತು.

ಈ ವೇಳೆ ಮಾತನಾಡಿದ ರೇವಣ್ಣ ಅವರು, ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಒಲವಿದೆ. ನೀವು ಸ್ಪರ್ಧೆ ಮಾಡಿದರೆ ತೊಂದರೆ ಆಗುತ್ತದೆ. ಯೋಚನೆ ಮಾಡಿ ಎಂದು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ವಿನಯ್ ಕುಮಾರ್, ಒಮ್ಮೆ ಮಾಡಿರುವ ನಿರ್ಧಾರ ವಾಪಸ್ ಪಡೆಯಲು ಸಾಧ್ಯವೇ ಇಲ್ಲ. ನಾನು ಸ್ಪರ್ಧೆ ಮಾಡುತ್ತಿದ್ದು, ಲೋಕಸಭಾ ಕ್ಷೇತ್ರದಲ್ಲಿ ನಾನು ಗೆಲ್ಲುವ ಎಲ್ಲಾ ಅವಕಾಶಗಳಿವೆ. ಕಳೆದ 30 ವರ್ಷಗಳಿಂದ ಎರಡು ಕುಟುಂಬಗಳದ್ದೇ ಪಾಳೇಗಾರಿಕೆ ಸಂಸ್ಕೃತಿ ಇದೆ. ಇದರ ವಿರುದ್ಧ ಜನರು ಇದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಎಲ್ಲಾ ವರ್ಗದವರು ಬೆಂಬಲಿಸುತ್ತಾರೆ ಎಂಬ ವಿಶ್ವಾಸ ನನ್ನದು ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯ ಅವರೂ ಸಹ ಕಣದಿಂದ ಹಿಂದೆ ಸರಿಯುವಂತೆ ವಿನಯ್ ಕುಮಾರ್ ಅವರಿಗೆ ಹೇಳುವಂತೆ ಹೇಳಿದ್ದಾರೆ. ಬಂದಿದ್ದೇನೆ. ಮುಂದೆ ಉತ್ತಮ ಅವಕಾಶಗಳಿವೆ. ಹಾಗಾಗಿ, ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದು ಬೇಡ ಎಂದು ರೇವಣ್ಣ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ವಿನಯ್ ಕುಮಾರ್, ದಾವಣಗೆರೆಯಲ್ಲಿ ಆಗುತ್ತಿರುವ ಬೆಳವಣಿಗೆ ಎಲ್ಲವೂ ಗೊತ್ತಿದೆ. ಜನರ ಮನದಲ್ಲಿ ವಿನಯ್ ಕುಮಾರ್ ಹೆಸರು ಅಚ್ಚಳಿಯದೇ ಉಳಿದಿದೆ. ಜನರ ಅಪೇಕ್ಷೆಯಂತೆ ಸ್ಪರ್ಧೆ ಮಾಡುತ್ತಿದ್ದೇನೆ. ಕಣದಿಂದ ಹಿಂದೆ ಸರಿಯುವ ಮಾತೇ ಇಲ್ಲ ಎಂದು ಸ್ಪಷ್ಟ ಪಡಿಸಿದರು.

ನನ್ನ ಸ್ಪರ್ಧೆ ಘೋಷಣೆಯಾದ ಬಳಿಕ ಬಿಜೆಪಿ ಹಾಗೂ ಕಾಂಗ್ರೆಸ್ ನಲ್ಲಿ ನಡುಕ ಶುರುವಾಗಿದೆ. ಎರಡೂ ಕುಟುಂಬಗಳಿಗೆ ಟಿಕೆಟ್ ನೀಡಲಾಗಿದೆ. ಸ್ವಾಭಿಮಾನದ ಸ್ಪರ್ಧೆ ಇದು. ಜನರು ಕೈಹಿಡಿಯುತ್ತಾರೆ ಎಂಬ ಭರವಸೆ ಇದೆ ಎಂದರು.

ಅಹಿಂದ ವರ್ಗ ಮಾತ್ರವಲ್ಲ, ಲಿಂಗಾಯತ ಸಮುದಾಯವೂ ಸೇರಿದಂತೆ ಎಲ್ಲಾ ಜಾತಿ, ಧರ್ಮದವರು ನನಗೆ ಸಹಕಾರ ನೀಡುತ್ತಾರೆ ಎಂಬ ವಿಶ್ವಾಸ ಇದೆ. ಅಚ್ಚರಿ ಫಲಿತಾಂಶ ಬಂದೇ ಬರುತ್ತದೆ ಎಂದು ರೇವಣ್ಣ ನೇತೃತ್ವದ ನಿಯೋಗಕ್ಕೆ ವಿನಯ್ ಕುಮಾರ್ ಅವರು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದರು.


## ಶ್ರೀಮತಿ ಬಸವಲಿಂಗಮ್ಮ ನಿಧನ



ಹರಿಹರ ತಾಲ್ಲೂಕು ಮಿಟ್ಲಕಟ್ಟೆ ಗ್ರಾಮದ ವಾಸಿ
ದಿ. ಸಂಗವ್ವಳ್ಳಿ ಪರಮೇಶ್ವರಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಬಸವಲಿಂಗಮ್ಮ**

ಇವರು ದಿನಾಂಕ 14.04.2024ರ ಭಾನುವಾರ ಸಂಜೆ 7.45ಕ್ಕೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.04.2024ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮವಾದ ಮಿಟ್ಲಕಟ್ಟೆಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗದವರು
ಮೊ : 95352 69849


## ಚಿತ್ರ ನಿರ್ಮಾಪಕ ಜಗದೀಶ್ ಆತ್ಮಹತ್ಯೆ

ಬೆಂಗಳೂರು, ಏ. 14 – ಚಿತ್ರ ನಿರ್ಮಾಪಕ ಹಾಗೂ ಉದ್ಯಮಿ ಸೌಂದರ್ಯ ಜಗದೀಶ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ತಮ್ಮ ನಿವಾಸದಲ್ಲಿ ಜಗದೀಶ್ ಭಾನುವಾರ ಬೆಳಿಗ್ಗೆ ಆತ್ಮಹತ್ಯೆ ಪ್ರಯತ್ನ ನಡೆಸಿದ್ದಾರೆ. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆ ವೇಳೆಗೆ ಸಾವು ಸಂಭವಿಸಿತ್ತು ಎಂದು ಜಗದೀಶ್ ಸ್ನೇಹಿತ ಶ್ರೇಯಸ್ ಹೇಳಿದ್ದಾರೆ. ಜಗದೀಶ್ ಅವರು ಅಪ್ಪು ಪಪ್ಪು, ಸ್ನೇಹಿತರು, ಮಸ್ತ್ ಮಜಾ ಮಾಡಿ ಹಾಗೂ ರಾಮಲೀಲಾ ಮುಂತಾದ ಚಿತ್ರಗಳನ್ನು ನಿರ್ಮಿಸಿದ್ದರು.

## ಹರಿಹರದ ಬಳಿ ಅಪರಿಚಿತನ ಸಾವು

ದಾವಣಗೆರೆ, ಏ. 14- ಹರಿಹರ ಮತ್ತು ಕುಮಾರಪಟ್ಟಣಂ ರೈಲ್ವೆ ನಿಲ್ದಾಣದ ಮಧ್ಯೆ 50-55 ವಯಸ್ಸಿನ, ಸಾಧಾರಣ ಮೈಕಟ್ಟು, ಕೋಲು ಮುಖ, ಬಿಳಿ ಬಣ್ಣದ ತಲೆ ಕೂದಲು, ಬಿಳಿ ಬಣ್ಣದ ಗಡ್ಡ-ಮೀಸೆ ಬಿಟ್ಟಿರುವ ವ್ಯಕ್ತಿ ಮೃತಪಟ್ಟಿದ್ದು, ಈತನ ವಾರುಸುದಾರರ ಪತ್ತೆಗೆ ಮನವಿ ಮಾಡಲಾಗಿದೆ. ಮಾಹಿತಿಗಾಗಿ ದಾವಣಗೆರೆ ರೈಲ್ವೆ ಪೊಲೀಸ್ ಠಾಣೆ (08192-259 643, 9480802123) ಅಥವಾ ಕಂಟ್ರೋಲ್ ರೂಂ (080-2287 1291)ನ್ನು ಸಂಪರ್ಕಿಸಬಹುದು.

# ಅಡುಗೆ ಮಾಡಲೂ ಬರುತ್ತೆ, ಮನೆತನ ನಡೆಸೋದೂ ಗೊತ್ತು

ಹೊನ್ನಾಳಿ, ಏ.14- ನನಗೆ ಚೆನ್ನಾಗಿ ಅಡುಗೆ ಮಾಡಲು ಬರುತ್ತೆ, ಮಾತನಾಡುವುದರ ಜೊತೆಗೆ ಮನೆತನ ನಡೆಸುವುದು ಸೇರಿದಂತೆ, ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ದೇಶ ಸೇವೆ ಮಾಡುವುದೂ ಗೊತ್ತು ಎಂದು ದಾವಣಗೆರೆ ಲೋಕಸಭಾ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಹೇಳಿದರು.

ಇಲ್ಲಿನ ಟಿ.ಬಿ. ವೃತ್ತದ ವಾಣಿ ಹೊಂಡಾ ಶೋರೂಂ ಬಳಿ ನೂತನ ಬಿಜೆಪಿ ಕಾರ್ಯಾಲಯವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕರ್ತರೇ ಪಕ್ಷದ ಆಸ್ತಿ, ಪ್ರತಿ ಬೂತ್ ಮಟ್ಟದಲ್ಲಿ ಮತದಾರರ ಮನವೊಲಿಸಿ ಮತ ಹಾಕಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಮಾತನಾಡಿ, ತಾಲ್ಲೂಕಿನಲ್ಲಿ ನಾವು, ರೇಣುಕಾಚಾರ್ಯ ಸೇರಿ ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದೇವೆ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಜಿಲ್ಲಾ ಮುಖಂಡರ ಉಪಸ್ಥಿತಿಯಲ್ಲಿ ಇದೇ ದಿನಾಂಕ 19ರಂದು ನಾಮಪತ್ರ ಸಲ್ಲಿಸಲಿದ್ದು, ಅವಳಿ ತಾಲ್ಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು, ಮುಖಂಡರು ಆಗಮಿಸಿ ಬೆಂಬಲಿಸುವಂತೆ ಮನವಿ ಮಾಡಿದರು.



ಹೊನ್ನಾಳಿಯಲ್ಲಿ ಬಿಜೆಪಿ ಕಾರ್ಯಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಗಾಯತ್ರಿ ಸಿದ್ದೇಶ್ವರ

ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಸೂರ್ಯ-ಚಂದ್ರ ಇರುವುದು ಎಷ್ಟು ಸತ್ಯವೋ, ಮೂರನೇ ಬಾರಿ ನರೇಂದ್ರ ಮೋದಿ ಪ್ರಧಾನಿಯಾಗುವುದು ಅಷ್ಟೇ ಸತ್ಯವಾಗಿದ್ದು, 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿರುವ ಮೋದಿಯವರ ಕೈ ಬಲಪಡಿಸಲು ದಾವಣಗೆರೆ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಗೆಲ್ಲಿಸುವುದರ ಜೊತೆಗೆ ಯಡಿಯೂರಪ್ಪ ಹಾಗೂ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಕನಸು ನನಸಾಗಿಸಬೇಕಿದೆ ಎಂದರು.

ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ಮಾತನಾಡಿ, ಹೊನ್ನಾಳಿ ತಾಲ್ಲೂಕಿನ ಮತದಾರರು ಹಾಗೂ ಜನತೆ ಎಷ್ಟು ಬುದ್ದಿವಂತರೆಂದು ಈ ಹಿಂದೆ ನಡೆದಿರುವ ಚುನಾವಣೆಗಳಲ್ಲಿ ತೋರಿಸಿದ್ದೀರಿ. ಅದರಂತೆ ಮೇ 7ರ ಚುನಾವಣೆಯಲ್ಲೂ ಹಿಂದಿಗಿಂತಲೂ ಹೆಚ್ಚು ಮತಗಳು ಬರುವಂತೆ ಅಭ್ಯರ್ಥಿ ಗೆಲುವಿಗೆ ಮುಂದಾಗಬೇಕೆಂದರು.

ರಾಜ್ಯ ಹಿಂದುಳಿದ ವರ್ಗಗಳ ಬಿಜೆಪಿ ಉಪಾಧ್ಯಕ್ಷ ಕೆ.ಪಿ.ಕುಬೇಂದ್ರಪ್ಪ ಮಾತನಾಡಿ, ಉಕ್ರೇನ್-ರಷ್ಯಾ ನಡುವೆ ನಡೆದ ಯುದ್ಧದ ಸಂದರ್ಭದಲ್ಲಿ 22 ಸಾವಿರ ಭಾರತೀಯರನ್ನು ರಕ್ಷಿಸಿ, ದೇಶಕ್ಕೆ ಸುರಕ್ಷಿತವಾಗಿ ಕರೆತಂದ ಮೋದಿಗೆ ನಾವೆಲ್ಲರೂ ಬೆಂಬಲಿಸೋಣ ಎಂದರು.

ತಾಲ್ಲೂಕು ಬಿಜೆಪಿ ಮಂಡಲದ ಅಧ್ಯಕ್ಷ ಜೆ.ಕೆ.ಸುರೇಶ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್. ರಾಜಶೇಖರ್, ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಮುಖಂಡರಾದ ಧನಂಜಯ ಕಡ್ಲೆಬಾಳು, ಅನಿಲ್ ಕುಮಾರ್, ರಾಜನಹಳ್ಳಿ ಶಿವಕುಮಾರ್, ಜಯಮ್ಮ, ಕೋಳೇನಹಳ್ಳಿ ಸತೀಶ್, ನಾಗರಾಜ್, ಅಣ್ಣೇಶ್, ನೆಲಹೊನ್ನೆ ಮಂಜುನಾಥ್, ಧರ್ಮಪ್ಪ, ಶಿವಾನಂದ ಇತರರು ಉಪಸ್ಥಿತರಿದ್ದರು.

# ಬರಪೀಡಿತ ಹಣೆಪಟ್ಟಿಯಿಂದ ಹೊರತರಲು ವಿಶೇಷ ಕಾಳಜಿ

**(5ನೇ ಪುಟದಿಂದ)** ನಿಟ್ಟಿನಲ್ಲಿ ಕೆರೆ- ಕಟ್ಟೆಗಳನ್ನು ತುಂಬಿಸುವ ಕಾರ್ಯಕ್ಕೆ ಈಗಾಗಲೇ ಚಾಲನೆ ನೀಡಲಾಗಿದೆ. ಇದನ್ನು ಮುಂದುವರೆಸಿಕೊಂಡು ಹೋಗುವ ಸಂಕಲ್ಪ ನನ್ನದಾಗಿದ್ದು, ಭದ್ರಾ ಮೇಲ್ದಂಡೆ ಯೋಜನೆ ಸಹ ಕ್ಷೇತ್ರಕ್ಕೆ ಸಾಕಷ್ಟು ಅನುಕೂಲ ಆಗಲಿದೆ. ಇದಕ್ಕಾಗಿ ಕೇಂದ್ರ ಸರ್ಕಾರ 5300 ಕೋಟಿ ಅನುದಾನ ನೀಡಿದೆ ಎಂದು ಹೇಳಿದರು.

ಕಳೆದ ಚುನಾವಣೆಗಳಲ್ಲಿ ಹರಪನಹಳ್ಳಿ ತಾಲ್ಲೂಕಿನ ಈ ಏಳು ಗ್ರಾಮ ಪಂಚಾಯತಿಗಳು ಬಿಜೆಪಿ ಗೆ ಹೆಚ್ಚಿನ ಮತ ನೀಡಿ ಆಶೀರ್ವಾದ ಮಾಡಿವೆ. ಈ ಬಾರಿಯೂ ಕೂಡ ಅತಿ ಹೆಚ್ಚಿನ ಮತಗಳನ್ನು ನನಗೆ ನೀಡುವುದರ ಮುಖಾಂತರ ಆಶೀರ್ವಾದ ಮಾಡಿ ಎಂದು ಮನವಿ ಮಾಡಿಕೊಂಡರು.

ಪ್ರತಿಯೊಬ್ಬ ಕಾರ್ಯಕರ್ತರೂ ಕೂಡ ನೀವೇ ಅಭ್ಯರ್ಥಿ ಎನ್ನುವ ರೀತಿಯಲ್ಲಿ ಕೆಲಸ ಮಾಡಬೇಕು. ನೀವು ಹಾಕಿಸುವ ಒಂದೊಂದು ಮತ ಈ ದೇಶವನ್ನು ಎಲ್ಲ ದೃಷ್ಟಿಯಿಂದ ಬಲಪಡಿಸಲಿದೆ. ನಿಮ್ಮ ಮಕ್ಕಳ ಭವಿಷ್ಯ ಉಜ್ವಲಗೊಳಿಸಲಿದೆ ಎಂದರು.

ಇದು ಜನರಿಗೆ ಸುಲಭವಾಗಿ ಸಿಗುವವರ ಮತ್ತು ಸುಲಭವಾಗಿ ಸಿಗದೇ ಇರುವವರ ನಡುವೆ ನಡೆಯುತ್ತಿರುವ ಚುನಾವಣೆ. ಯಾರನ್ನು ಆಯ್ಕೆ ಮಾಡಬೇಕು ಎನ್ನುವ ನಿರ್ಧಾರ ನಿಮ್ಮದಾಗಿದೆ. ಮತ ನೀಡುವ ಮುನ್ನ ಹತ್ತು ಬಾರಿ ಯೋಚಿಸಿ ಮತದಾನ ಮಾಡಿ ಎಂದರು.

ಜಗಳೂರು ಮಾಜಿ ಶಾಸಕ, ಬಿಜೆಪಿ ಮುಖಂಡ ಎಚ್.ಪಿ.ರಾಜೇಶ್ ಮಾತನಾಡಿ, ಇದು ಭಾರತದ ದಿಕ್ಸೂಚಿ ಚುನಾವಣೆ. ದೇಶದ ಹಿತದೃಷ್ಟಿಯಿಂದ ಮೋದಿ ಅವರನ್ನು ಮೂರನೇ ಬಾರಿಗೆ ಪ್ರಧಾನಿಯನ್ನಾಗಿ ಮಾಡಬೇಕಿರುವ ಹೊಣೆಗಾರಿಕೆ ನಮ್ಮ ಮೇಲಿದೆ. ಗಾಯತ್ರಿ ಅವರು ಹೆಚ್ಚಿನ ಮತಗಳ ಅಂತರದಿಂದ ಗೆದ್ದು ದೆಹಲಿಗೆ ಹೋದರೆ ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗುತ್ತಾರೆ. ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮತ ಹಾಕಿಸಬೇಕು ಎಂದರು ಮನವಿ ಮಾಡಿದರು.

ನಾನು, ಎಸ್.ವಿ. ರಾಮಚಂದ್ರ ಅವರು ಜಗಳೂರು ಶಾಸಕರಾಗಿದ್ದಾಗ ಸಾಕಷ್ಟು ಕೆಲಸ ಮಾಡಿದ್ದೀವಿ. 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ತರುವಲ್ಲಿ ನನ್ನ ಮತ್ತು ರಾಮಚಂದ್ರಣ್ಣನ ಕೊಡುಗೆ ಇದೆ. ಆಗ ಕುಮಾರಸ್ವಾಮಿ ಅವರು ಹಾಗೂ ಬಿ.ಎಸ್. ಯಡಿಯೂರಪ್ಪ ಅವರು ಹಣ ಮಂಜೂರು ಮಾಡಿ ಯೋಜನೆಗೆ ಚಾಲನೆ ಕೊಟ್ಟಿದ್ದರು. ಅದರ ಪರಿಣಾಮ ಚಟ್ನಹಳ್ಳಿ ಗುಡ್ಡಕ್ಕೆ ನೀರು ಬರುತ್ತಿದೆ ಎಂದರು.

ಜಗಳೂರು ಕ್ಷೇತ್ರಕ್ಕೆ ಸಂಸದ ಸಿದ್ದೇಶ್ವರ ಮತ್ತು ಅವರ ತಂದೆ ದಿ. ಜಿ.ಮಲ್ಲಿಕಾರ್ಜುನಪ್ಪ ಅವರ ಕೊಡುಗೆ ಅಪಾರ. ಈ ಬಾರಿ ಸಿದ್ದೇಶ್ವರರ ಪತ್ನಿ ಗಾಯತ್ರಿ ಕಣದಲ್ಲಿದ್ದಾರೆ. ಅವರನ್ನು ಗೆಲ್ಲಿಸುವ ಜವಾಬ್ದಾರಿ ನಮ್ಮ ಮೇಲಿದೆ. ಕಾರ್ಯಕರ್ತರು, ಮತದಾರರು ನಮ್ಮ ಕೈ ಬಲಪಡಿಸಿದರೆ, ಗಾಯತ್ರಿ ಸಿದ್ದೇಶ್ವರ್ ಅವರು ಗೆದ್ದು, ಮೋದಿ ಅವರ ಕೈ ಬಲಪಡಿಸುತ್ತಾರೆ. ಮತದಾನಕ್ಕೆ ಇನ್ನು 22 ದಿನ ಬಾಕಿ ಇದ್ದು, ಕಾರ್ಯಕರ್ತರು, ಅಭಿಮಾನಿಗಳು ಕೇಂದ್ರ ಸರ್ಕಾರದ ಮತ್ತು ಸಿದ್ದೇಶ್ವರರ ಅಭಿವೃದ್ಧಿ ಕೆಲಸಗಳನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಮಾಜಿ ಶಾಸಕ ಎಸ್.ವಿ.ರಾಮಚಂದ್ರಪ್ಪ ಮಾತನಾಡಿ, ಆಡು ಮುಟ್ಟದ ಸೊಪ್ಪಿಲ್ಲ ಎಂಬ ಮಾತಿನಂತೆ ನಮ್ಮ ಸಿದ್ದೇಶ್ವರ ಅವರು ತಲುಪದ, ನೋಡದ ಹಳ್ಳಿಗಳಲ್ಲಿಲ್ಲ. ಇಡೀ ಕ್ಷೇತ್ರದ ಎಲ್ಲ ಹಳ್ಳಿಗಳಿಗೆ ಸಿದ್ದೇಶಣ್ಣ ಸಂಚಾರ ಮಾಡಿ ಜನ ಸಂಪಾದನೆ ಮಾಡಿದ್ದಾರೆ. ಸಿದ್ದೇಶ್ವರ ಅವರು ನಾಲ್ಕು ಬಾರಿ, ಅವರ ತಂದೆ ಜಿ.ಮಲ್ಲಿಕಾರ್ಜುನಪ್ಪ ಅವರು 2 ಬಾರಿ ಒಟ್ಟು 6 ಬಾರಿ ಸಂಸದರಾಗಿದ್ದಾರೆ. ಈಗ 7ನೇ ಬಾರಿಗೆ ಗಾಯತ್ರಿ ಸಿದ್ದೇಶ್ವರ್ ಅವರು ಸಂಸದರಾಗುವುದು ನಿಶ್ಚಿತ. ಇಷ್ಟು ಬಾರಿ ಅವರ ಕುಟುಂಬ ಗೆಲ್ಲುವುದಕ್ಕೆ ಅವರು ಮಾಡಿರುವ ಅಭಿವೃದ್ಧಿ ಕಾರ್ಯಗಳೇ ಶ್ರೀರಕ್ಷೆ. ಭಾಜಪ ಕಾರ್ಯಕರ್ತರು, ಮೋದಿ ಅಭಿಮಾನಿಗಳು, ನಮ್ಮ ಹಿತೈಷಿಗಳು ಎಲ್ಲರೂ ಗಾಯತ್ರಿ ಸಿದ್ದೇಶ್ವರ್ ಅವರಿಗೆ ಹೆಚ್ಚಿನ ಮತಗಳನ್ನು ನೀಡಿ ಗೆಲ್ಲಿಸಬೇಕು ಎಂದು ಕರೆ ನೀಡಿದರು.

ಜೆಡಿಎಸ್ ಮುಖಂಡ ಕಲ್ಲೇರುದ್ರೇಶ್ ಮಾತನಾಡಿ, ಯಾರೋ ಇಬ್ಬರು ನನಗೆ ಮೋದಿ ಅವರಿಗೆ ಏಕೆ ವೋಟ್ ಹಾಕಬೇಕು. ಅವರನ್ನೇ ಏಕೆ ಪ್ರಧಾನಿ ಮಾಡಬೇಕು ಎಂದು ಕೇಳಿದರು. ನೀನು ಬದುಕಿರುವುದೇ ಸಾಕ್ಷಿ ಏಕೆ ಮೋದಿ ಅವರಿಗೆ ಮತ ಹಾಕಬೇಕು ಅಂತ ನಾನು ಹೇಳಿದೆ. ಕೋವಿಡ್ ಬಂದಾಗ ಇಟಲಿ ದೇಶ ವಿಲವಿಲ ಒದ್ದಾಡಿತ್ತು. ಆಗ ಹಿಂದೂರಾಷ್ಟ್ರ ಭಾರತದಲ್ಲಿ ಅಷ್ಟು ಜನ ಸತ್ರು, ಇಷ್ಟು ಜನ ಸತ್ರು ಅಂತೆಲ್ಲ ಮಾತಾಡುತ್ತಿದ್ದರು. ಹಿಂದೂ ರಾಷ್ಟ್ರ ಮುಳುಗುತ್ತೆ ಅಂತ ಇಟಲಿಯವರು ಮಾತಾಡುತ್ತಿದ್ದರು. ಆದರೆ, ಮೋದಿ ಅವರು ಎಲ್ಲರಿಗೂ ಸರಿಯಾದ ಸಮಯಕ್ಕೆ ಇಂಜೆಕ್ಷನ್ ಕೊಟ್ಟು ಬದುಕಿಸಿದರು. ಅವರು ನೀಡಿದ ಇಂಜೆಕ್ಷನ್‌ನಿಂದಲೇ ನೀನು ಬದುಕಿರುವುದು. ಅಷ್ಟೇ ಸಾಕಲ್ಲವೇ ನೀನು ಮೋದಿ ಅವರಿಗೆ ವೋಟ್ ಹಾಕೋಕೆ ಅಂತ ಹೇಳಿದೆ. ಮೋದಿ ಅವರಿಗೆ ಏಕೆ ವೋಟ್ ಹಾಕಬೇಕು ಅನ್ನೋದಕ್ಕೆ ಸಾಕಷ್ಟು ಉತ್ತರಗಳಿವೆ. ನೀವು ಅದನ್ನು ಪ್ರತಿಯೊಬ್ಬರಿಗೂ ತಿಳಿಸಿ ಗಾಯತ್ರಿ ಸಿದ್ದೇಶ್ವರ್ ಅವರನ್ನು ಗೆಲ್ಲಿಸಿ, ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡಬೇಕು ಎಂದು ಕರೆ ನೀಡಿದರು.

ಬಿಜೆಪಿ ಯುವ ಮುಖಂಡರಾದ ಜಿ.ಎಸ್. ಅನಿತ್ ಕುಮಾರ್, ಬಳ್ಳಾರಿ ಸಂಸದ ಅರಸೀಕೆರೆ ದೇವೇಂದ್ರಪ್ಪ, ಅಣ್ಣಪ್ಪ, ಪಲ್ಲಾಗಟ್ಟೆ ಮಹೇಶ್, ಕೆಂಚಮ್ಮನಹಳ್ಳಿ ಮಂಜಣ್ಣ, ಬಿದಕೆರೆ ರವಿಕುಮಾರ್, ಅರಸೀಕೆರೆ ದ್ಯಾಮೇಗೌಡ್ರು, ಇಂದಿರಾ ರಾಮಚಂದ್ರಪ್ಪ, ಸೊಕ್ಕೆ ನಾಗರಾಜ್, ಮಂಜುನಾಥ್, ಫಣಿಯಾಪುರ ಲಿಂಗರಾಜ್, ಜಂಬನಗೌಡ ಹಾಗೂ ಇತರರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮೈದೂರು ಗ್ರಾಮದ ಮುಖಂಡರು ಬಿಜೆಪಿಗೆ ಸೇರ್ಪಡೆ



ದಾವಣಗೆರೆ, ಏ. 14- ಮೈದೂರು ಗ್ರಾಮದ ಎಚ್. ದೇವರಾಜ್, ಕೆ.ಬಸವನಗೌಡ, ಪ್ರವೀಣ್ ಕುಮಾರ್, ಎಚ್.ಸುರೇಶ್, ಲೋಹಿತ್, ಎಚ್.ದೊಡ್ಡಬಸವರಾಜ್, ಮಂಜುನಾಥ್ ಕ್ಯಾರೆಕಟ್ಟೆ, ರವಿಗೌಡ, ನವೀನ್, ನಾಗರಾಜ್, ಸಿದ್ದನಗೌಡ, ಎಚ್.ಮಾರುತಿ, ಬಿ. ಸಿದ್ಧನಗೌಡ ಬಿಜೆಪಿ ಪಕ್ಷದ ತತ್ವ, ಸಿದ್ಧಾಂತ ಮೆಚ್ಚಿ ಸಂಸದ ಜಿ.ಎಂ.ಸಿದ್ಧೇಶ್ವರ್ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆ ಯಾದರು. ಪಾಲಿಕೆ ವಿಪಕ್ಷ ನಾಯಕ ಪ್ರಸನ್ನ ಕುಮಾರ್, ಮುಖಂಡರಾದ ಹನುಮಂತನಾಯ್ಕ್, ಎಸ್ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನವಾಸ ದಾಸ ಕರಿಯಪ್ಪ ಇದ್ದರು.

# ಮತ್ತೆ ಮಾತೃಪಕ್ಷ ಸೇರಿದ ಅಮರಾವತಿಯ ಪ್ರಭಾವಿ ಮುಖಂಡ



ದಾವಣಗೆರೆ, ಏ. 14- ಇತ್ತೀಚೆಗೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದ ಹರಿಹರ ವಿಧಾನಸಭಾ ಕ್ಷೇತ್ರದ ಅಮರಾವತಿಯ ಪ್ರಭಾವಿ ಮುಖಂಡ ಹಾಗೂ ಹರಿಹರ ನಗರಸಭೆ ಸದಸ್ಯ ಎ.ಬಿ.ಎಂ. ವಿಜಯ್‌ಕುಮಾರ್ ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಶಾಸಕ ಬಿ.ಪಿ.ಹರೀಶ್ ಅವರ ಸಮ್ಮುಖದಲ್ಲಿ ಮರಳಿ ಮಾತೃ ಪಕ್ಷ ಬಿ.ಜೆ.ಪಿ ಗೆ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಒ.ಬಿ.ಸಿ.ಮೋರ್ಚಾ ರಾಜ್ಯ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪುರಸಭಾ ಸದಸ್ಯೆ ಅಶ್ವಿನಿ ಕೃಷ್ಣ, ಮುಖಂಡರಾದ ಜಿ.ಎಸ್.ಅನಿತ್ ಕುಮಾರ್, ಎ.ಸಿ.ಆನಂದ್, ಮಲ್ಲಿಕಾರ್ಜುನ್, ಕಿರಣ್ ಮೂಲಿಮನೆ, ಅದ್ವೈತ್ ಶಾಸ್ತ್ರಿ, ರಮೇಶ್ ನಂದಿಗಾವಿ, ರವಿ ರಾಯ್ಕರ್, ಅಶ್ವಿನಿ ಶ್ರೀನಿವಾಸ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕುಂಬಳೂರು ಗ್ರಾಮದ ಕಾಂಗ್ರೆಸ್ ಮುಖಂಡರು ಬಿಜೆಪಿ ಸೇರ್ಪಡೆ



ಹರಿಹರ, ಏ.14- ತಾಲ್ಲೂಕಿನ ಕುಂಬಳೂರು ಗ್ರಾಮದ ಕಾಂಗ್ರೆಸ್ ಮುಖಂಡರು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು. ಸಂಸದ ಜಿ.ಎಂ.ಸಿದ್ಧೇಶ್ವರ್ ಅವರ ಸಮ್ಮುಖದಲ್ಲಿ ಕುಂಬಳೂರು ಗ್ರಾಮದ ಹನುಮಂತ, ಹರೀಶ್, ದೇವರಾಜ್, ಅಪ್ಪು, ಕಿರಣ್, ರಾಕೇಶ್, ನಾಗರಾಜ್, ಸುಭಾಷ್, ಯುವರಾಜ್ ಬಿಜೆಪಿ ಸೇರ್ಪಡೆಯಾದರು. ಎಸ್ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ದಾಸ್ ಕರಿಯಪ್ಪ ಜೊತೆಯಲ್ಲಿದ್ದರು.

# ಜಗಳೂರು: ನಾಲಂದ ಪದವಿಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ

ಜಗಳೂರು, ಏ.14- ಪಟ್ಟಣದ ನಾಲಂದ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಶರತ್ ಕುಮಾರ್ ಎಸ್.ಓ. 582 (ಶೇ.97), ಧನುಷ್ ಬಿ.ಆರ್. 558 (ಶೇ.93), ಭೂಮಿಕ ಸಿ.ಎನ್.556 (ಶೇ.92.66). ವಾಣಿಜ್ಯ ವಿಭಾಗದಲ್ಲಿ ಚಿರಬಿ ಮಾರಕ್ಕ 555 (ಶೇ.92.50), ಪ್ರಕೃತಿ. ಬಿ.ಕೆ.554(ಶೇ.92.33),

ಕಲಾ ವಿಭಾಗದಲ್ಲಿ ಸುಮಯ ಸಿ. 562 (ಶೇ.93.66), ಆಕಾಶ್ ಕೆ.ವೈ. 554 (92.33), ಪವನ್ ಕುಮಾರ್.ಪಿ. 550 (91.66) ಶೇಕಡಾವಾರು ಅಂಕ ಗಳಿಸಿದ್ದು ಕಾಲೇಜು ಆಡಳಿತ ಮಂಡಳಿ ಕಾರ್ಯದರ್ಶಿ ಟಿ.ಮಧು, ಪ್ರಾಂಶುಪಾಲ ಬಿ.ಎನ್.ಎಂ.ಸ್ವಾಮಿ ಹಾಗೂ ಉಪನ್ಯಾಸಕರು ಅಭಿನಂದಿಸಿದ್ದಾರೆ.

# ನಟ ಸಲ್ಮಾನ್ ಮನೆ ಎದುರು ಗುಂಡು

ಮುಂಬೈ, ಏ. 14 – ಭಾನುವಾರ ಬೆಳಿಗ್ಗೆ ಮೋಟರ್ ಬೈಕ್‌ನಲ್ಲಿ ಬಂದ ಇಬ್ಬರು ಬಾಲಿವುಡ್ ನಟ ಸಲ್ಮಾನ್ ಖಾನ್ ಮನೆ ಎದುರು ಗುಂಡು ಹಾರಿಸಿದ ಘಟನೆ ನಡೆದಿದೆ. ನಂತರ ಪೊಲೀಸರು ಭದ್ರತೆಯನ್ನು ಹೆಚ್ಚಿಸಿದ್ದಾರೆ.

ಬಾಂದ್ರಾ ಪ್ರದೇಶದ ಗ್ಯಾಲಕ್ಸಿ ಅಪಾರ್ಟ್‌ಮೆಂಟ್ ಹೊರಗೆ ಇಬ್ಬರು ವ್ಯಕ್ತಿಗಳು ನಾಲ್ಕು ಸುತ್ತು ಗುಂಡು ಹಾರಿಸಿ ಅಲ್ಲಿಂದ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಾರೆನ್ಸ್ ಬಿಷ್ಣೋಯಿ ತಂಡದ ಅನಮೋಲ್ ಬಿಷ್ಣೋಯಿ, ಗುಂಡು ಹಾರಿಸಿದ ಹೊಣೆ ಹೊತ್ತುಕೊಳ್ಳುವ ಹೇಳಿಕೆ ನೀಡಿದ್ದಾನೆ.

# ಅಭಿವೃದ್ಧಿ ಪರ 'ಮೋದಿ ಗ್ಯಾರಂಟಿ'

**(5ನೇ ಪುಟದಿಂದ)** ಪರಿಶಿಷ್ಟರು, ಬಡವರು, ಮಧ್ಯಮ ವರ್ಗ, ಮಹಿಳೆಯರು, ಯುವಕರು, ಹಿರಿಯ ನಾಗರಿಕರು, ರೈತರು, ಬೇಸ್ತರು, ಕಾರ್ಮಿಕರು, ವ್ಯಾಪಾರಿಗಳು ಸೇರಿದಂತೆ ಹತ್ತು ಸಾಮಾಜಿಕ ವರ್ಗಗಳಿಗೆ ಪ್ರತ್ಯೇಕ ಭರವಸೆಗಳನ್ನು ನೀಡ ಲಾಗಿದೆ. ಭದ್ರತೆ, ಸಮೃದ್ಧಿ ಹಾಗೂ ನಗರಗಳಲ್ಲಿನ ಜೀವನ ಸುಲಲಿತಗೊಳಿ ಸುವುದೂ ಸೇರಿದಂತೆ 14 ವಿಷಯಗಳಿಗೆ ಒತ್ತು ನೀಡಲಾಗಿದೆ.

ಉತ್ತರ, ದಕ್ಷಿಣ ಹಾಗೂ ಪೂರ್ವ ಭಾಗಗಳಲ್ಲಿ ಬುಲೆಟ್ ರೈಲು ಯೋಜನೆಗಳನ್ನು ಜಾರಿಗೆ ತರುವ ಹಾಗೂ ವಂದೇ ಭಾರತ್ ರೀತಿಯ ನವ ಯುಗದ ರೈಲುಗಳನ್ನು ವಿಸ್ತರಿಸುವ ಭರವಸೆ ನೀಡಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪ್ರಣಾಳಿಕೆಯನ್ನು ಬಿಜೆಪಿ ಕೇಂದ್ರ ಕಚೇರಿಯಲ್ಲಿ ಬಿಡುಗಡೆ ಮಾಡಿದ್ದಾರೆ. ಮೊದಲ ಪ್ರತಿಗಳನ್ನು ಸರ್ಕಾರದ ಯೋಜನೆಗಳ ಫಲಾನುಭವಿಗಳಿಗೆ ನೀಡಲಾಗಿದೆ.

ಕಾಶಿ ವಿಶ್ವನಾಥ ಕಾರಿಡಾರ್ ಮಾದರಿಯಲ್ಲಿ ದೇಶಾದ್ಯಂತ ಧಾರ್ಮಿಕ ಹಾಗೂ ಪ್ರವಾಸಿ ತಾಣ ಗಳನ್ನು ಅಭಿವೃದ್ಧಿ ಪಡಿಸಲಾಗುವುದು. ನಾಗರಿಕತೆ ಪರಂಪರೆಯ ಹಾಗೂ ಸಾಂಸ್ಕೃತಿಕ ತಾಣಗಳನ್ನು ಸಂರಕ್ಷಿಸಲು 'ಭಾರತೀಯ ಸಂಸ್ಕೃತಿ ಕೋಶ' ಸ್ಥಾಪಿಸಲಾಗುವುದು ಎಂದು ಭರವಸೆ ನೀಡಲಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಪ್ರಣಾಳಿಕೆಯು ಯುವ ಭಾರತದ ಆಶಯಗಳನ್ನು ಬಿಂಬಿಸುತ್ತದೆ. ಜೀವನದ ಗುಣಮಟ್ಟ ಹಾಗೂ ಘನತೆಗೆ ಆದ್ಯತೆ ನೀಡಿದೆ ಎಂದು ಹೇಳಿದರು.

# ಮಲೇಬೆನ್ನೂರು : ಹೊಸಳ್ಳಿ ಮಠದ ಕಾಲೇಜಿಗೆ ಶೇ 99.07 ಫಲಿತಾಂಶ



ಮಲೇಬೆನ್ನೂರು, ಏ.14- ಸಮೀಪದ ಹೊಸಳ್ಳಿ ಶ್ರೀ ಮಹಾಯೋಗಿ ವೇಮನ ಸಂಸ್ಥಾನ ಮಠದ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.99.07 ರಷ್ಟು ಫಲಿತಾಂಶ ಲಭಿಸಿದೆ.

ವಿಜ್ಞಾನ ವಿಭಾಗದ 217 ವಿದ್ಯಾರ್ಥಿಗಳಿಗೆ ಅತ್ಯುನ್ನತ ಶ್ರೇಣಿಯಲ್ಲಿ 101 ವಿದ್ಯಾರ್ಥಿಗಳು ಹಾಗೂ ಉನ್ನತ ಶ್ರೇಣಿಯಲ್ಲಿ 141 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಎಂ.ಜಿ.ಆಶಾ ಎಂಬ ವಿದ್ಯಾರ್ಥಿನಿ 600 ಕ್ಕೆ 584 ಅಂಕಗಳನ್ನು ಪಡೆಯುವ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಎಂ.ಟಿ. ಸಂಗೀತ (578), ಎಂ.ರಮ್ಯಾ (576), ಮಂಜನಗೌಡ (575), ಸೂರ್ಯಕಲಾ (573), ವಿ.ಟಿ.ರಮ್ಯಾ (572) ಅಂಕಗಳನ್ನು ಪಡೆದುಕೊಂಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ 14 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ 28 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಎಸ್.ಅರ್ಪಿತಾ (567), ಜಿ.ತ್ರಿವೇಣಿ (567), ಆರ್.ಹೆಚ್. ಯಶ್ಮಿತ (559), ಎಂ.ಆರ್.ಲತಾ (553) ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದು ಕೊಟ್ಟಿದ್ದಾರೆ.

ಈ ವಿದ್ಯಾರ್ಥಿಗಳನ್ನು ಮಠದ ಗುರುಗಳಾದ ಶ್ರೀ ವೇಮನಾನಂದ ಸ್ವಾಮೀಜಿ ಮತ್ತು ಡಾ.ಬಸವಕುಮಾರ ಸ್ವಾಮೀಜಿ ಹಾಗೂ ಆಡಳಿತ ಮಂಡಳಿಯ ಸದಸ್ಯರು ಹಾಗೂ ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ಬಿ.ಎಂ.ಕುಂಜುರಾಣಿ ಹಾಗೂ ಉಪನ್ಯಾಸಕ ಮತ್ತು ಬೋಧಕೇತರ ವರ್ಗದವರು ಅಭಿನಂದಿಸಿದ್ದಾರೆ.

# ಹರಿಹರಕ್ಕೆ ಕುಡಿವ ನೀರಿನ ಯೋಜನೆ ಜಾರಿಗೆ ಬದ್ಧ



**(5ನೇ ಪುಟದಿಂದ)** ನಿಖಿಲ್ ಕೊಂಡಜ್ಜಿ, ಜಿ.ಮಂಜುನಾಥ್ ಪಟೇಲ್, ಹನಗವಾಡಿ ಕುಮಾರ್, ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್, ಹಿರಿಯ ವಕೀಲ ಪ್ರಸನ್ನಕುಮಾರ್, ಬೆಳ್ಳೂಡಿ ಬಸವರಾಜ್, ಸಿ.ಎನ್.ಹುಲಗೇಶ್, ಸಂತೋಷ್ ನೋಟದ್, ಕಿರಣ್ ಭೂತೆ, ಹನಗವಾಡಿ ಸಾರಥಿ ಮಂಜು, ಮಲೇಬೆನ್ನೂರಿನ ತಳಸದ ಬಸವರಾಜ್, ಬಿಳಸನೂರು ನರೇಂದ್ರ, ಪಿ.ಆರ್.ಕುಮಾರ್, ಪಿ.ಹೆಚ್.ಶಿವಕುಮಾರ್, ಪುರಸಭೆ ಸದಸ್ಯರಾದ ಬಿ.ಮಂಜುನಾಥ್, ಸಾಬೀರ್ ಅಲಿ, ಬಿ.ಸುರೇಶ್, ಪಿ.ಆರ್.ರಾಜು, ಭೋವಿಕುಮಾರ್, ಎ.ಕೆ.ಲೋಕೇಶ್, ಕಡ್ಲೆಗೊಂದಿ ಕೇಶವ, ಕುಂಬಳೂರಿನ ಜಿ.ಶಂಕರಗೌಡ, ಎಂ.ವಾಸುದೇವ ಮೂರ್ತಿ ಮತ್ತಿತರರು ಈ ವೇಳೆ ಹಾಜರಿದ್ದರು.

# ಬಿಜೆಪಿ,ಜೆಡಿಎಸ್ ಮೈತ್ರಿಯಿಂದ ರಾಜ್ಯದಲ್ಲಿ ಹೊಸ ಸಂಚಲನ



## ಹರಪನಹಳ್ಳಿ : ಜೆಡಿಎಸ್ ಮತ್ತು ಬಿಜೆಪಿಯ ಮೈತ್ರಿ ಸಭೆಯಲ್ಲಿ ಮಾಜಿ ಶಾಸಕ ಎಚ್.ಎಸ್ ಶಿವಶಂಕರ್

ಹರಪನಹಳ್ಳಿ, ಏ.14- ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಿಂದಾಗಿ ರಾಜ್ಯದಲ್ಲಿ ಹೊಸ ಸಂಚಲನ ಸೃಷ್ಟಿಯಾಗಿದ್ದು, ಎದುರಾಳಿ ಪಕ್ಷಗಳಿಗೆ ಸೋಲುವ ಭಯ ಕಾಡುತ್ತಿದೆ ಎಂದು ಮಾಜಿ ಶಾಸಕ ಎಚ್.ಎಸ್ ಶಿವಶಂಕರ್ ಹೇಳಿದರು.

ಪಟ್ಟಣದ ನಟರಾಜ ಕಲಾಭವನದಲ್ಲಿ ಹಮ್ಮಿಕೊಂಡಿದ್ದ ಜೆಡಿಎಸ್ ಮತ್ತು ಬಿಜೆಪಿಯ ಮೈತ್ರಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ದಿನೇ ದಿನೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪ್ರಿಯತೆ ಎತ್ತರಕ್ಕೆ ಹೋಗುತ್ತಿರುವುದು ನಮ್ಮ ಕಾರ್ಯಕರ್ತರಿಗೆ ಉತ್ಸಾಹ ತಂದಿದೆ ಎಂದು ಹೇಳಿದರು.

ಇಲ್ಲಿನ ಲೋಕಸಭಾ ಕ್ಷೇತ್ರದಲ್ಲಿ ಜಿ.ಎಂ. ಸಿದ್ದೇಶ್ವರರು ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಆದ್ದರಿಂದ ಬರುವ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿ ಪಕ್ಷವನ್ನು ಬೆಂಬಲಿಸುವ ಮೂಲಕ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸೋಣ ಎಂದರು.

ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ ಮಾತನಾಡಿ, ರಾಜ್ಯ ಹಾಗೂ ದೇಶದ ಅಭಿವೃದ್ಧಿಗೆ ಬಿಜೆಪಿ ಮತ್ತು ಜೆಡಿಎಸ್‌ನ ಮೈತ್ರಿ ಅವಶ್ಯವಾಗಿದೆ. ಹಿಂದೆ ರಾಜ್ಯದಲ್ಲಿ ಬಿಜೆಪಿ ಜತೆಗೆ ಮೈತ್ರಿ ಸರ್ಕಾರ ರಚಿಸಿದಾಗ ಪಕ್ಷಕ್ಕೆ ಹೆಚ್ಚಿನ ಕೆಲಸ ಮಾಡಲು ಸಾಧ್ಯವಾಗಿತ್ತು. ಆದರೆ ಕಾಂಗ್ರೆಸ್ ಜತೆಗೆ ಮೈತ್ರಿಗೊಂಡಾಗ ಹೆಚ್ಚಿನ ಬೆಂಬಲ ದೊರಕಲಿಲ್ಲ ಎಂದ ಅವರು, ಕಾಂಗ್ರೆಸ್ ದರ್ಪದ ರಾಜಕೀಯ ಮಾಡಿಕೊಂಡು ಬಂದಿದೆ ದೂರಿದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಶಿರಹಟ್ಟಿ ದಂಡೆಪ್ಪ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರವು ಪ.ಜಾತಿ ಮತ್ತು ಪ.ಪಂಗಡದವರಿಗೆ ಮೋಸ ಮಾಡುತ್ತಿದೆ. ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ವ್ಯಯಿಸಿ ರಾಜ್ಯದ ಬೊಕ್ಕಸ ಖಾಲಿ ಮಾಡುತ್ತಿದೆ ಎಂದರು.

2006ರಲ್ಲಿ ಬಿಜೆಪಿ ಜೊತೆ ಜೆಡಿಎಸ್ ಮೈತ್ರಿಗೊಂಡಾಗ ರಾಜಕೀಯದಲ್ಲಿ ಹೊಸಪರ್ವ ಸೃಷ್ಟಿಯಾಗಿತ್ತು. ಇಂದು ಮತ್ತೆ ಜೆಡಿಎಸ್ ಮತ್ತು ಬಿಜೆಪಿಯ ಮೈತ್ರಿಯಿಂದ ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ಬಂದಿದೆ ಎಂದರು.

ವಿಜಯನಗರ ಜೆಡಿಎಸ್ ಜಿಲ್ಲಾಧ್ಯಕ್ಷ ಕೆ. ಕೊಟ್ರೇಶ್, ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕೆ. ಆನಂದಪ್ಪ, ಜಿಲ್ಲಾ ಕಾರ್ಯಾಧ್ಯಕ್ಷ ಟಿ. ಗಣೇಶ್ ದಾಸಕರಿಯಪ್ಪ, ಮುಖಂಡರಾದ ಡಾ.ಎಂ. ಸುರೇಶ್, ನಾಗರಾಜ್, ರಾಜಪ್ಪ, ಟಿ. ಗೋಣೆಪ್ಪ, ಸಣ್ಣವೀರಪ್ಪ, ಎಂ.ಮಲ್ಲಿಕಾರ್ಜುನ್, ಟಿ. ಮಂಜುನಾಥ್, ಬಸವರಾಜ್, ಅಜ್ಜಯ್ಯ, ಮುನೇಗೌಡ, ಸಾಸ್ವಿಹಳ್ಳಿ ಬಸಣ್ಣ, ಬಸವರಾಜ ಕಲ್ಲಳ್ಳಿ ಮತ್ತು ಇತರರು ಇದ್ದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
**ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ**
ಮಾರ್ಚ್ 23 ರಿಂದ 2 ತಿಂಗಳ ಕಾಲ.
*ಇಂದಿನ ಮಜ್ಜಿಗೆ ಪ್ರಾಯೋಜಕರು :-*
ದಿ. ಎ. ಗೋವಿಂದಶೆಟ್ಟು, ಎಸ್.ಆರ್.ಕೆ. ಕಾಫಿ ವರ್ಕ್ಸ್, ಮಂಡಿಪೇಟೆ ಮತ್ತು ಕುಟುಂಬವರ್ಗದವರ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

**ಸೈಟುಗಳ ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಹಳೇ KHB ಪಕ್ಕದ HRM ಬಡಾವಣೆಯಲ್ಲಿ 30x40 ಪೂರ್ವ & ಪಶ್ಚಿಮ ದಿಕ್ಕಿನ ನಾಲ್ಕು (4) ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**ಮನೆ ಬಾಡಿಗೆಗೆ**
ವಿನೋಬನಗರ, 9ನೇ ಕ್ರಾಸ್ 3ನೇ ಮೇನ್, ಸಿದ್ಧಿವಿನಾಯಕ ಸ್ಕೂಲ್ ಎದುರಿಗೆ, ಡಬಲ್ ಬೆಡ್ ರೂಂ, RCC ಮನೆ ಬೋರ್‌ವೆಲ್ ಮತ್ತು ಮುನ್ಸಿಪಲ್ ನೀರು ಸೌಕರ್ಯವಿದೆ. ವಿಚಾರಿಸಿ.
98453 28368

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸ್ಪೋಕನ್ ಇಂಗ್ಲಿಷ್**
ಮತ್ತು ಕಂಪ್ಯೂಟರ್ ಕ್ಲಾಸಸ್ ಟ್ಯಾಲಿ ಪ್ರೈಮ್ ಮತ್ತು ಟೈಪಿಂಗ್
ಬ್ರೈಟ್ ಕೋಚಿಂಗ್ ಅಕಾಡೆಮಿ
63640 55263

**Property Hub**
• EC
• E-swathu
• Building Licence
• Khatha Change
96118 66449

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
BILLING STAFF (TALLY) AND ACCOUNTANT WITH 1-2 YEARS EXPERIENCE.
FOR PULSES, RICE AND FOOD GRAIN SHOP. IMMEDIATE JOINING.
Knowledge of GST Will Be Prefered.
Good Salary Will Be Offered.
Send Resume By Whatsap to
98440 78802

**SSLC SUMMER CLASS**
From April 10th to May 28th
10 AM to 5 PM Classes
SAMRUDDHI ACADEMY DAVANAGERE
81472 62361, 96202 62361

**ಬೇಕಾಗಿದ್ದಾರೆ**
ದಾವಣಗೆರೆ ಪ್ರಸಿದ್ಧವಾದ ಲಾಡ್ಜ್‌ನಲ್ಲಿ ಕೆಲಸ ಮಾಡಲು ಲೇಡಿ ರಿಸಪ್ಷನಿಸ್ಟ್ ಬೇಕಾಗಿದ್ದಾರೆ.
ಆಕರ್ಷಕ ಸಂಬಳ.
ಆಸಕ್ತರು ಸಂಪರ್ಕಿಸಿ.
63619 17504

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ. ಕಲಿಯುವವರೆಗೂ ಆದ್ಯತೆಯುಂಟು. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
91108 98377

**ವೀರಶೈವ ಖಾನಾವಳಿ**
ಕ್ಲೀನಿಂಗ್ ಅಂಡ್ ಸಪ್ಲೈಯರ್ ಕೆಲಸಕ್ಕೆ ಬೇಕಾಗಿದ್ದಾರೆ
ಸಂಬಳ : 12,000, ಸಂಪರ್ಕಿಸಿ
99017 70830
99458 29046

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್‌ಮನ್, ಸೇಲ್ಸ್‌ಗರ್ಲ್ಸ್ ಮತ್ತು ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1.
87622 21696

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ.
ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಸಂಪರ್ಕಿಸಿ.
80883 67539, 97390 63544

**ಸರ್ಕಾರಿ ನೌಕರಿಗಾಗಿ**
ಗವರ್ನಮೆಂಟ್ ಜಾಬ್‌ಗೆ ಸಂಪರ್ಕಿಸಿ.
ಯಾವುದೇ ಸರ್ಕಾರಿ ನೌಕರಿಗಾಗಿ ಪ್ರಯತ್ನಿಸುತ್ತಿರುವ ಯುವಕ, ಯುವತಿಯರ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ.
80733 42011

**ಬೇಕಾಗಿದ್ದಾರೆ**
ಶಾಂತಿ ಇವಿ ವೆಹಿಕಲ್ ಶೋರೂಮ್
ಪುರುಷರು ಸೇಲ್ಸ್ ಎಕ್ಸಿಕ್ಯೂಟಿವ್ 02
ಫೀಲ್ಡ್ ವರ್ಕ್ 03
ಮಹಿಳೆಯರು ಎಕ್ಸಿಕ್ಯೂಟಿವ್ 01
ಕ್ಯಾಶ್ ಅಂಡ್ ಕಂಪ್ಯೂಟರ್ 2
ಸ್ಟೇಡಿಯಂ ಎದುರು, ಹದಡಿ ರಸ್ತೆ, ದಾವಣಗೆರೆ.
92432 19553

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**WANTED**
Boys & Girls required for sales executive job at
Food Mart Supermarket
Quali : PUC, Any Degree
M : 98864 63531

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಕೆಲಸಕ್ಕೆ ಬೇಕಾಗಿದ್ದಾರೆ**
ವೆಂಕಟೇಶ್ವರ ಆಗ್ರೋ ಏಜೆನ್ಸಿ
Collection Boy
ಬೇಕಾಗಿದ್ದಾರೆ.
94481 14352
85536 21050

**Shree Veerabhadreshwara Service Station**
Indian Oil Petrol Bunk
Malebennur - Sales men and women required with education qualification of either 10th/2nd PUC
Required urgently contact at
63640 03286

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ 2 ವರ್ಷ. ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ/ಪಿಯುಸಿ, ಪಾಸ್/ಫೇಲ್
ಶ್ರೀ ಗಂಗೋತ್ರಿ ಹೆಲ್ತ್ ಅಲೈಡ್ ಕಾಲೇಜ್, ಗಾಂಧಿ ಸರ್ಕಲ್ ಹತ್ತಿರ, ಮೋತಿ ಸ್ವೀಟ್ಸ್/ಟ್ರೆಂಡ್ಸ್ ಪಕ್ಕ, ದಾವಣಗೆರೆ.
86602 35013

**ಕಮರ್ಷಿಯಲ್ ಖಾಲಿ ಜಾಗ ಬಾಡಿಗೆಗೆ ದೊರೆಯುತ್ತದೆ ವಿಚಾರಿಸಿ**
ಶಾಮನೂರು ಹತ್ತಿರ, ಸರ್ವೀಸ್ ರೋಡಿಗೆ ಹತ್ತಿರ, 26 ಸಾವಿರ ಅಡಿ
160x180 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
90367 34919

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**PU Failed Batches**
PCMB, Commerce, Arts
100% Results
ಸಿಂಚನ ಅಕಾಡೆಮಿ, ದಾವಣಗೆರೆ.
90195 80600, 8861445913

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ.
50 ಸದಸ್ಯರು 6500ರೂ. ರಿಂದ 10,000 ರೂ. ವರೆಗೆ
ಸ್ಕಂದ ಚಿಟ್ ಫಂಡ್ಸ್ (ರಿ)
78997 75159

**HIRING**
1) Sales Executive (0-1 year's experience in Sales/Any degree)
2) Senior Sales Executive (1-2 year's Experience in Sales/Any degree)
ITSY BITSY Store
Ram & Co. Circle, Davangere.
78994 58806

**ತಕ್ಷಣ ಬೇಕಾಗಿದ್ದಾರೆ**
Male Field Officer,
Female Office work,
SSLC/PUC/Degree
98447 22555
98445 17979

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಸೇಲ್ಸ್ ಮಾಡಿ ಅನುಭವವಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ.
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್, ಮಂಡಿಪೇಟೆ, ದಾವಣಗೆರೆ

**ಬೇಕಾಗಿದ್ದಾರೆ**
(ಮಹಿಳೆ/ಪುರುಷರು)
1) ದೈಹಿಕ ಶಿಕ್ಷಕರು - ಬಿ.ಪಿ.ಇಡಿ
2) ಕಛೇರಿ ನಿರ್ವಾಹಕರು - ಯಾವುದೇ ಪದವಿ.
ಸಂಪರ್ಕಿಸಿ :
(ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೆ)
98448 60466, 99863 46490

**ಸ್ಪೋಕನ್ ಇಂಗ್ಲೀಷ್ ಕಂಪ್ಯೂಟರ್ ಅಕಾಡೆಮಿ**
33 ದಿನಗಳಲ್ಲಿ ಇಂಗ್ಲೀಷ್ ಕಲಿಯಿರಿ
ವಿಕಾಸ್ ಅಕಾಡೆಮಿ - ದಾವಣಗೆರೆ
93802 29199
97399 22225

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಸೋಮವಾರ, ಏಪ್ರಿಲ್ 15, 2024

☎ 08192 254736 | 91642 99999

# ಇಸ್ರೇಲ್ ಮೇಲೆ ಇರಾನ್ ಅಭೂತಪೂರ್ವ ದಾಳಿ

ಟೆಲ್ ಅವೀವ್, ಏ. 14 – ಇಸ್ರೇಲ್ ಮೇಲೆ ಇರಾನ್ ಅಭೂತಪೂರ್ವ ದಾಳಿ ನಡೆಸಿದ್ದು, ನೂರಾರು ಡ್ರೋನ್ ಹಾಗೂ ಕ್ಷಿಪಣಿಗಳನ್ನು ಸಿಡಿಸಿದೆ. ಇದರಿಂದಾಗಿ ಮಧ್ಯ ಪ್ರಾಚ್ಯದಲ್ಲಿ ಪರಿಸ್ಥಿತಿ ಮತ್ತಷ್ಟು ಉದ್ವಿಗ್ನಗೊಂಡಿದೆ.

ಇರಾನ್ ಸಿಡಿಸಿದ 300ಕ್ಕೂ ಹೆಚ್ಚು ಡ್ರೋನ್ ಹಾಗೂ ಕ್ಷಿಪಣಿಗಳ ಪೈಕಿ ಶೇ.99ರಷ್ಟನ್ನು ವಿಫಲಗೊಳಿಸಿರುವುದಾಗಿ ಇಸ್ರೇಲ್ ಹೇಳಿದ್ದು, ಇದು ವೈಮಾನಿಕ ರಕ್ಷಣೆಯಲ್ಲಿ ದೊಡ್ಡ ಯಶಸ್ಸು ಎಂದು ಹೇಳಿದೆ. ಈ ದಾಳಿಗೆ ಇಸ್ರೇಲ್ ಪ್ರತಿದಾಳಿ ನಡೆಸುವ ಸಾಧ್ಯತೆಯೂ ಇದೆ.

ಈ ಬಗ್ಗೆ ಹೇಳಿಕೆ ನೀಡಿರುವ ಇಸ್ರೇಲ್‌ನ ರಿಯರ್ ಅಡ್ಮಿರಲ್ ಡೇನಿಯಲ್ ಹಗರಿ, ಇರಾನ್ 300ಕ್ಕೂ ಹೆಚ್ಚು ಶಸ್ತ್ರಗಳ ಮೂಲಕ ವೈಮಾನಿಕ ದಾಳಿ ನಡೆಸಿದೆ. ಇವುಗಳಲ್ಲಿ ಶೇ.99ರಷ್ಟನ್ನು ತಡೆಯಲಾಗಿದೆ ಎಂದಿದ್ದಾರೆ.

ಯಾವುದೇ ಡ್ರೋನ್ ಇಲ್ಲವೇ ಕ್ರೂಸ್ ಕ್ಷಿಪಣಿ ಇಸ್ರೇಲ್ ತಲುಪಲು ಸಾಧ್ಯವಾಗಿಲ್ಲ. ಕೆಲ ಖಂಡಾಂತರ ಕ್ಷಿಪಣಿಗಳು ನುಸುಳಿವೆ. 25 ಕ್ರೂಸ್ ಕ್ಷಿಪಣಿಗಳನ್ನು ಇಸ್ರೇಲ್ ವಾಯು ಪಡೆ ಹೊಡೆದುರುಳಿಸಿದೆ ಎಂದು ಹಗರಿ ಹೇಳಿದ್ದಾರೆ.

ಇಸ್ರೇಲ್ ವಾಯುನೆಲೆಗೆ ಅಲ್ಪ ಹಾನಿಯಾಗಿದೆ. ಆದರೂ, ಈ ನೆಲೆ ಕೆಲಸ ಮಾಡುತ್ತಿದೆ. ದಕ್ಷಿಣ ಇಸ್ರೇಲ್‌ನಲ್ಲಿ ಕ್ಷಿಪಣಿ ದಾಳಿಯ ನಡುವೆ 7 ವರ್ಷದ ಬಾಲಕಿಗೆ ಗಂಭೀರ ಗಾಯವಾಗಿದೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಅಮೆರಿಕದ ಅಧ್ಯಕ್ಷ ಜೋ ಬಿಡೆನ್, ಇರಾನ್ ನಡೆಸಿದ ದಾಳಿಗೆ ಸಂಘಟಿತ ರಾಯಭಾರಿ ಪ್ರತಿಕ್ರಿಯೆ ನೀಡಲು ಏಳು ಮುಂಚೂಣಿ ಪ್ರಜಾಪ್ರಭುತ್ವ ದೇಶಗಳ ಸಭೆ ಕರೆಯುವುದಾಗಿ ಹೇಳಿದ್ದಾರೆ.

ಇರಾನ್ ನಡೆಸಿದ ದಾಳಿ ಇನ್ನಷ್ಟು ದೊಡ್ಡ ಸ್ವರೂಪದ ಸೈನಿಕ ಸಂಘರ್ಷಕ್ಕೆ ಕಾರಣವಾಗುವು ದನ್ನು ಬಿಡೆನ್ ಆಡಳಿತ ಬಯಸುತ್ತಿಲ್ಲ ಎಂಬುದು ಅದರ ಹೇಳಿಕೆಯಿಂದ ಸ್ಪಷ್ಟವಾಗುತ್ತಿದೆ.

ಈ ತಿಂಗಳ ಆರಂಭದಲ್ಲಿ ಸಿರಿಯಾದಲ್ಲಿರುವ ಇರಾನ್ ರಾಯಭಾರಿ ಕೇಂದ್ರದ ಮೇಲೆ ದಾಳಿ ನಡೆಸಲಾಗಿತ್ತು. ದಾಳಿಯಲ್ಲಿ ಇರಾನ್ ಸೈನ್ಯದ ಇಬ್ಬರು ಜನರಲ್‌ಗಳು ಸಾವನ್ನಪ್ಪಿದ್ದರು. ಈ ದಾಳಿಗೆ ಇಸ್ರೇಲ್ ಕಾರಣ ಎಂದು ಇರಾನ್ ಆರೋಪಿಸಿತ್ತು. ನಂತರದಲ್ಲಿ ಇರಾನ್ 170



300ಕ್ಕೂ ಹೆಚ್ಚು ಡ್ರೋನ್, ಕ್ಷಿಪಣಿಗಳಲ್ಲಿ ಶೇ.99ರಷ್ಟನ್ನು ತಡೆದ ಇಸ್ರೇಲ್

ಡ್ರೋನ್, 30ಕ್ಕೂ ಹೆಚ್ಚು ಕ್ರೂಸ್ ಕ್ಷಿಪಣಿ ಹಾಗೂ 120 ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಬಳಸಿ ಭಾನುವಾರ ದಾಳಿ ನಡೆಸಿದೆ. ದಾಳಿ ಮುಗಿದಿದೆ ಎಂದು ಇರಾನ್ ನಂತರದಲ್ಲಿ ಹೇಳಿದೆ. ಇಸ್ರೇಲ್ ತನ್ನ ವೈಮಾನಿಕ ನೆಲೆಯನ್ನು ಮತ್ತೆ ತೆರೆದಿದೆ.

1979ರಲ್ಲಿ ಇರಾನ್‌ನಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆದ ನಂತರ ಉಭಯ ದೇಶಗಳು ಪರೋಕ್ಷ ಸಮರ ನಡೆಸಿವೆ. ಆದರೆ, ಭಾನುವಾರ ಮೊದಲ ಬಾರಿಗೆ ಇರಾನ್ ನೇರ ದಾಳಿ ನಡೆಸಿದೆ.

ಅಮೆರಿಕದ ನೆರವಿನೊಂದಿಗೆ ಇಸ್ರೇಲ್ ಬಹು ಹಂತದ ವೈಮಾನಿಕ ರಕ್ಷಣಾ ವ್ಯವಸ್ಥೆ ಹೊಂದಿದೆ. ಇದರಿಂದಾಗಿ ದೂರಗಾಮಿ ಕ್ಷಿಪಣಿ, ಕ್ರೂಸ್ ಕ್ಷಿಪಣಿ, ಡ್ರೋನ್ ಹಾಗೂ ಅಲ್ಪ ದೂರದ ರಾಕೆಟ್ ಸೇರಿದಂತೆ ಹಲವಾರು ಬೆದರಿಕೆಗಳನ್ನು ತಡೆಯಲು ಸಾಧ್ಯವಾಗಿದೆ.

ಇಸ್ರೇಲ್ ಈಗಾಗಲೇ ಗಾಜಾದಲ್ಲಿ ಹಮಾಸ್ ವಿರುದ್ಧ ಸಮರ ಸಾರಿದೆ. ಉತ್ತರ ಗಡಿಯಲ್ಲಿ ಲೆಬನಾನ್‌ನ ಹೆಜ್ಬೊಲ್ಲಾ ವಿರುದ್ಧ ಹೋರಾಟ ನಡೆಸಿದೆ. ಹಮಾಸ್ ಹಾಗೂ ಹೆಜ್ಬೊಲ್ಲಾ ಎರಡಕ್ಕೂ ಇರಾನ್ ಬೆಂಬಲ ನೀಡುತ್ತಿದೆ.

## ಇರಾನ್ ದಾಳಿಯಿಂದ ಹೆಚ್ಚಾದ ಪ್ರಕ್ಷುಬ್ಧತೆ, ಸಮಾಧಾನಕ್ಕೂ ಅವಕಾಶ

ಟೆಲ್ ಅವೀವ್, ಏ. 14 – ಇಸ್ರೇಲ್ ಮೇಲೆ ಇರಾನ್ ನಡೆಸಿದ ದಾಳಿಯಿಂದ ಈ ಪ್ರಾಂತ್ಯದಲ್ಲಿ ಉದ್ವಿಗ್ನತೆ ಹೆಚ್ಚಾಗಿದ್ದು, ಸಂಘರ್ಷ ಮತ್ತಷ್ಟು ಹರಡುವ ಕಳವಳ ಉಂಟಾಗಿದೆ. ಆದರೆ, ಇರಾನ್, ಇಸ್ರೇಲ್, ಅಮೆರಿಕ ಹಾಗೂ ಹಮಾಸ್ ಈ ಸಂಘರ್ಷದಿಂದ ತಮಗೆ ಲಾಭವಾಗಿದೆ ಎಂದು ಹೇಳಿಕೊಂಡು ಸಮಾಧಾನಪಟ್ಟುಕೊಳ್ಳಲು ಹಲವು ದಾರಿಗಳಿವೆ.

ಇಸ್ರೇಲ್ ಮೇಲೆ ಭಾನುವಾರ ಬೆಳಿಗ್ಗೆ 300ಕ್ಕೂ ಹೆಚ್ಚು ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸಲಾಗಿತ್ತು. ಇದು ಇಸ್ರೇಲ್‌ನ ರಕ್ಷಣಾ ವ್ಯವಸ್ಥೆಯನ್ನು ಪರೀಕ್ಷೆಗೆ ಒಡ್ಡಿತ್ತು. ಆದರೆ, ಇಸ್ರೇಲ್ ಶೇ.99ರಷ್ಟು ದಾಳಿ ತಡೆದಿದ್ದು, ಯಾವುದೇ ಪ್ರಮುಖ ಹಾನಿಯಾಗಿಲ್ಲ.

ಕಳೆದ ಅಕ್ಟೋಬರ್ 7ರಂದು ಹಮಾಸ್ ನಡೆಸಿದ ದಾಳಿಯು ಇಸ್ರೇಲ್ ಭದ್ರತಾ ವ್ಯವಸ್ಥೆ ಹಾಗೂ ಗುಪ್ತಚರ ವ್ಯವಸ್ಥೆಗೆ ತೀವ್ರ ಮುಖಭಂಗ ತಂದಿತ್ತು. ಭಾನುವಾರದ ಬೆಳವಣಿಗೆಯು ಇಸ್ರೇಲ್ ಸೈನಿಕ ವ್ಯವಸ್ಥೆಯ ಮೇಲಿನ ನಂಬಿಕೆ ಬಲಗೊಳಿಸಿದೆ.

ಇರಾನ್ ದಾಳಿ ತಡೆಯಲು ಇಸ್ರೇಲ್‌ನ ಮಿತ್ರ ದೇಶಗಳು ನೆರವಾಗಿವೆ. ಹಮಾಸ್ ವಿರುದ್ಧದ ಸಂಘರ್ಷದಲ್ಲಿ ಇಸ್ರೇಲ್ ಏಕಾಂಗಿಯಾಗುತ್ತಾ ಸಾಗಿದ್ದರ ನಡುವೆ ಈ ಬೆಳವಣಿಗೆಯಾಗಿದೆ.

ಇರಾನ್ ಸಹ ತನ್ನ ಬಲ ಪ್ರದರ್ಶನದ ಅವಕಾಶ ಪಡೆದುಕೊಂಡಿದೆ. ಸಿರಿಯಾದ ಡಮಸ್ಕಸ್‌ನಲ್ಲಿರುವ ಇರಾನ್‌ನ ರಾಯಭಾರಿ ಕೇಂದ್ರದ ಮೇಲೆ ನಡೆಸಲಾದ ದಾಳಿಯಲ್ಲಿ ಇಬ್ಬರು ಜನರಲ್‌ಗಳು ಹತರಾಗಿದ್ದರು. ಇದರ ಹಿಂದೆ ಇಸ್ರೇಲ್ ಕೈವಾಡ ಇದೆ ಎಂದು ಇರಾನ್ ತಿಳಿಸಿತ್ತು. ದಶಕಗಳ ನಂತರ ಇರಾನ್ ಮೊದಲ ಬಾರಿಗೆ ನೇರವಾಗಿ ಇಸ್ರೇಲ್ ಮೇಲೆ ದಾಳಿ ನಡೆಸಿದೆ. ಪ್ರತಿದಾಳಿಯ ಬಗ್ಗೆ ಗಂಭೀರವಾಗಿರುವುದಾಗಿ ಇರಾನ್ ಸಂದೇಶ ನೀಡಿದೆ. ಹಲವು ಗಂಟೆಗಳ ಕಾಲ ದಾಳಿ ನಡೆಸಿದ ನಂತರ, ಕಾರ್ಯಾಚರಣೆ ಮುಗಿದಿರುವುದಾಗಿ ಇರಾನ್ ಹೇಳಿದೆ.

ಈ ದಾಳಿ ಹಿಮ್ಮೆಟ್ಟಿಸುವಲ್ಲಿ ಅಮೆರಿಕ ಪ್ರಮುಖ ಪಾತ್ರ ವಹಿಸಿದೆ. ಅಮೆರಿಕ ತನ್ನ ಶಕ್ತಿ ಹಾಗೂ ನಂಬಿಕಾರ್ಹತೆಯನ್ನು ಪ್ರದರ್ಶಿಸಿದೆ. ಬಿಡೆನ್ ಆಡಳಿತ ಈ ಸಂಘರ್ಷ ಮತ್ತಷ್ಟು ಹರಡದಿರಲಿ ಎಂದು ಬಯಸುವ ಸೂಚನೆ ನೀಡಿದೆ. ಈ ಬಗ್ಗೆ ಇಸ್ರೇಲ್ ಮೇಲೆ ಇನ್ನಷ್ಟು ಒತ್ತಡ ಹೇರುವ ಸಾಧ್ಯತೆಯೂ ಇದೆ.

ಇರಾನ್ ನಡೆಸಿರುವ ದಾಳಿಯನ್ನು ಹಮಾಸ್ ಸ್ವಾಗತಿಸಿದೆ. ಇಸ್ರೇಲ್ ವಿಸ್ತೃತ ಸಮರದಲ್ಲಿ ಭಾಗಿಯಾದರೆ, ಗಾಜಾದಲ್ಲಿ ಹಮಾಸ್‌ಗೆ ಹೆಚ್ಚಿನ ಬೆಂಬಲ ಸಿಗುವ ಸಾಧ್ಯತೆ ಇದೆ. ಗಾಜಾ ಸಮರದಲ್ಲಿ ಇರಾನ್ ಇನ್ನಷ್ಟು ಭಾಗಿಯಾಗಲಿ ಎಂದು ಹಮಾಸ್ ಬಯಸುತ್ತಿದೆ.

# ಅಭಿವೃದ್ಧಿ ಪರ 'ಮೋದಿ ಗ್ಯಾರಂಟಿ'

**ಲೋಕಸಭಾ ಚುನಾವಣೆಗಾಗಿ ಬಿಜೆಪಿ ಪ್ರಣಾಳಿಕೆ ಬಿಡುಗಡೆ**

ನವದೆಹಲಿ, ಏ. 14 – ಲೋಕಸಭಾ ಚುನಾವಣೆಗಾಗಿ ಬಿಜೆಪಿ 'ಮೋದಿ ಕಿ ಗ್ಯಾರಂಟಿ' ಹೆಸರಿನ ಪ್ರಣಾ ಳಿಕೆ ಬಿಡುಗಡೆ ಮಾಡಿದ್ದು, ಅಭಿವೃದ್ಧಿ ಹಾಗೂ ಜನಕಲ್ಯಾಣ ಯೋಜನೆ ಗಳಿಗೆ ಒತ್ತು ನೀಡಿದೆ. ಜನಪ್ರಿಯ ಯೋಜನೆ ಗಳು ಹಾಗೂ ಎನ್.ಆರ್.ಸಿ. ರೀತಿಯ ವಿವಾದಾತ್ಮಕ ವಿಷಯಗಳಿಂದ ದೂರವಿದೆ.

ಸಮಾಜದ ಹಲವಾರು ವರ್ಗಗಳಿಗಾಗಿ ಈಗಾಗಲೇ ರೂಪಿಸಿರುವ ಜನಕಲ್ಯಾಣ ಯೋ ಜನೆಗಳನ್ನು ಇನ್ನಷ್ಟು ವಿಸ್ತರಿಸುವುದಾಗಿ ಬಿಜೆಪಿ ಭರವಸೆ ನೀಡಿದೆ. ಒಂದು ದೇಶ ಒಂದು ಚುನಾವಣೆ ಹಾಗೂ ಏಕರೂಪ ನಾಗರಿಕ ಸಂಹಿತೆಯ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

70 ವರ್ಷ ಮೀರಿದ ಎಲ್ಲ ನಾಗರಿಕರನ್ನು 'ಆಯುಷ್ಮಾನ್ ಭಾರತ್' ಯೋಜನೆ ವ್ಯಾಪ್ತಿಗೆ ತರುವುದಾಗಿ ತಿಳಿಸಲಾಗಿದೆ. ಈ ಯೋಜನೆಯಡಿ 5 ಲಕ್ಷ ರೂ.ಗಳ ಆರೋಗ್ಯ ವಿಮೆ ನೀಡಲಾಗುತ್ತದೆ. **(4ನೇ ಪುಟಕ್ಕೆ)**

# ಕಾಂಗ್ರೆಸ್ 'ತುಕ್ಡೇ ತುಕ್ಡೇ ಗ್ಯಾಂಗ್‌ನ ಸುಲ್ತಾನ'



ಮೋದಿ ತರಾಟೆ

ಮೈಸೂರು, ಏ. 14 – ಕಾಂಗ್ರೆಸ್ ಪಕ್ಷ 'ತುಕ್ಡೇ ತುಕ್ಡೇ ಗ್ಯಾಂಗ್‌ನ ಸುಲ್ತಾನ' ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕಿಡಿ ಕಾರಿದ್ದು, ಈ ದೇಶವನ್ನು ಒಡೆಯುವ ಹಾಗೂ ದುರ್ಬಲಗೊಳಿಸುವ ದುರುದ್ದೇಶ ಆ ಪಕ್ಷಕ್ಕಿದೆ ಎಂದು ಆರೋಪಿಸಿದ್ದಾರೆ.

ಮೈಸೂರಿನಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ನಮ್ಮ ಮಕ್ಕಳು ದೇಶ ಸೇವೆ ಮಾಡಲಿ ಎಂದು ಭಾರತದ ತಾಯಂದಿರು ತಮ್ಮ ಮಕ್ಕಳನ್ನು ಸೈನ್ಯಕ್ಕೆ ಕಳಿಸುವ ಕನಸು ಕಾಣುತ್ತಾರೆ. ಮತ್ತೊಂದೆಡೆ ಕಾಂಗ್ರೆಸ್ ಪಕ್ಷ ತುಕ್ಡೇ ತುಕ್ಡೇ ಗ್ಯಾಂಗ್‌ನ ಸುಲ್ತಾನ ರೀತಿ ಆಗುತ್ತಿದೆ ಎಂದು ಟೀಕಿಸಿದರು.

ಕಾಂಗ್ರೆಸ್ ಪಕ್ಷ ದೇಶವನ್ನು ದ್ವೇಷಿಸುವ ಎಲ್ಲ ಮಿತಿಗಳನ್ನು ದಾಟಿದೆ. ಭಾರತದ ವಿರುದ್ಧ ಕಾಂಗ್ರೆಸ್ ನವರು ಮಾತನಾಡುವುದನ್ನು **(2ನೇ ಪುಟಕ್ಕೆ)**

# ಹರಿಹರಕ್ಕೆ ಶಾಶ್ವತ ಕುಡಿವ ನೀರಿನ ಯೋಜನೆ ಜಾರಿಗೆ ಬದ್ಧ

## ಬಿಜೆಪಿ, ಜೆಡಿಎಸ್ ಮುಖಂಡರು, ಮೂವರು ನಗರಸಭೆ ಸದಸ್ಯರು ಕಾಂಗ್ರೆಸ್ ಸೇರ್ಪಡೆಯಲ್ಲಿ ಸಚಿವ ಎಸ್ಸೆಸ್ಸೆಂ



ಹರಿಹರ, ಏ.14- ಹರಿಹರ ನಗರಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ರೂಪಿಸಿ, ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್.ಮಲ್ಲಿಕಾರ್ಜುನ್ ಭರವಸೆ ನೀಡಿದರು.

ಅವರು, ಭಾನುವಾರ ಹರಿಹರ ನಗರದ ಹೊರ ವಲಯದಲ್ಲಿರುವ ಸಭಾ ಭವನದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮುಖಂಡರು ಹಾಗೂ ಮೂವರು ನಗರಸಭೆ ಸದಸ್ಯರು ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ನಾನು ಈ ಹಿಂದೆ ಸಚಿವನಾಗಿದ್ದ ಸಂದರ್ಭದಲ್ಲಿ ಅಗಸನಕಟ್ಟೆ ಕೆರೆಯನ್ನು ಅಭಿವೃದ್ಧಿಪಡಿಸಿ, ಹರಿಹರ ನಗರಕ್ಕೆ ಕುಡಿಯುವ ನೀರು ಪೂರೈಸಬೇಕೆಂದು ಪ್ರಯತ್ನ ಮಾಡಿದ್ದೆವು. ಆದರೆ, ಕೆಲ ಕಾರಣಗಳಿಂದ ಅದು ಸ್ಥಗಿತಗೊಂಡಿತು. ಆದರೆ, ಈ ಬಾರಿ ನಾವೆಲ್ಲರೂ ಸೇರಿ 3-4 ಸಭೆಗಳನ್ನು ನಡೆಸಿ, ಯಾವ ರೀತಿ ಯೋಜನೆ ಸಿದ್ದಪಡಿಸಿ ಹರಿಹರ ನಗರಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಚರ್ಚಿಸಿ, ಸೂಕ್ತ ನಿರ್ಧಾರ ಕೈಗೊಂಡು ಯೋಜನೆ ಜಾರಿಗೊಳಿಸೋಣ ಎಂದ ಸಚಿವರು, ದಾವಣಗೆರೆ ಮಾದರಿಯಲ್ಲೇ ಹರಿಹರ ನಗರವನ್ನೂ ಹಂತ ಹಂತವಾಗಿ ಅಭಿವೃದ್ಧಿ ಪಡಿಸಲು ಸಹಕಾರ ನೀಡುವುದಾಗಿ ಹರಿಹರ ಜನತೆಗೆ ಮಾತುಕೊಟ್ಟರು.

ರಾಜ್ಯದ ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತಿನಂತೆ ಎಲ್ಲಾ ಜನರಿಗೆ ಅನುಕೂಲವಾಗುವ 5 ಗ್ಯಾರಂಟಿಗಳನ್ನು ಜಾರಿಗೊಳಿಸಿದೆ. ಬಿಜೆಪಿ ಶ್ರೀಮಂತರ ಪರವಾಗಿ ಕೆಲಸ ಮಾಡುತ್ತಿರುವುದರಿಂದ ಈ ಬಾರಿ ಬಡವರು, ಮಧ್ಯಮ ವರ್ಗದವರು, ಕಾರ್ಮಿಕರು, ರೈತರು ಕಾಂಗ್ರೆಸ್ ಬೆಂಬಲಿಸಿ, ಅಧಿಕಾರಿಕ್ಕೆ ತರುವ ಸಂಕಲ್ಪ ಮಾಡಿದ್ದಾರೆಂದು ಮಲ್ಲಿಕಾರ್ಜುನ್ ಹೇಳಿದರು.

ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಹರಿಹರ ಕ್ಷೇತ್ರದಿಂದ 25 ಸಾವಿರ ಮತಗಳ ಲೀಡ್ ಕೊಡುವುದಾಗಿ ಹೇಳಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಸಚಿವ ಮಲ್ಲಿಕಾರ್ಜುನ್ ಮತ್ತು ಡಾ. ಪ್ರಭಾ ಅವರು ಕಷ್ಟದಲ್ಲಿರುವ ಜನರಿಗೆ ಸದಾ ಸ್ಪಂದಿಸುತ್ತಾ ಬಂದಿದ್ದಾರೆ. ದಾನ-ಧರ್ಮದಲ್ಲಿ ಶಾಮನೂರು ಶಿವಶಂಕರಪ್ಪ ಅವರು ಮಾದರಿಯಾಗಿದ್ದಾರೆ. ಅಂತಹವರ ಕೈಗೆ ಅಧಿಕಾರ ಕೊಟ್ಟರೆ ಹರಿಹರ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಾರೆ ಎಂದರು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ ಮಾತನಾಡಿ, ರಾಜ್ಯ ಸರ್ಕಾರದ ಗ್ಯಾರಂಟಿಗಳನ್ನು ಜನರಿಗೆ ತಿಳಿಸಿ ಮತ ಕೇಳಬೇಕು ಮತ್ತು ಅಭ್ಯರ್ಥಿ ನಾವೇ ಎಂದುಕೊಂಡು ಕೆಲಸ ಮಾಡಿದರೆ ಅಭೂತ ಪೂರ್ವ ಗೆಲುವು ನಿಶ್ಚಿತ ಎಂದು ಪಕ್ಷದ ಮುಖಂಡರಿಗೆ, ಕಾರ್ಯಕರ್ತರಿಗೆ ತಿಳಿಸಿದರು.

ಈ ವೇಳೆ ಹರಿಹರ ನಗರಸಭೆ ಬಿಜೆಪಿ ಸದಸ್ಯರಾದ ಎಬಿಎಂ ವಿಜಯಕುಮಾರ್, ರಜನಿಕಾಂತ್, ಜೆಡಿಎಸ್ ಸದಸ್ಯ ಮುಜಾಮಿಲ್ ಬಿಲ್, ಹರಿಹರ ವಕೀಲರ ಸಂಘದ ಅಧ್ಯಕ್ಷ ಬಿ. ಆನಂದ್, ಬಿಜೆಪಿ ಮುಖಂಡರಾದ ಕೊಂಡಜ್ಜಿ ರಾಘವೇಂದ್ರ, ಪ್ರವೀಣ್ ಕುಮಾರ್, ಜೆಡಿಎಸ್ ಮುಖಂಡರಾದ ಪೈಲ್ವಾನ್ ಹನುಮಂತಪ್ಪ, ಮುಸ್ತಾಕ್ ಪಟೇಲ್, ಜುಬೇರ, ಪಿ.ಜಿ.ಹರ್ಷ, ಬಿ.ಎಂ.ಭರಮಪ್ಪ, ಇಲಿಯಾಜ್, ಬಿಜೆಪಿ ಮುಖಂಡ ಗುತ್ತೂರು ಗರಡಿಮನೆ ಬಸಪ್ಪ, ವಕೀಲ ಸಿ.ಬಿ.ರಾಘವೇಂದ್ರ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಕಾಂಗ್ರೆಸ್ ಮುಖಂಡರಾದ ಕೃಷ್ಣ ಸಾ ಭೂತೆ, ಎಂ.ಬಸಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ, ಡಿ.ಜಿ. ರಘುನಾಥ್, ಶಂಕರ್ ಖಟಾವಕರ್, ಕೆ.ಕೆ. ರಫೀಕ್, ಹಬೀಬುಲ್ಲಾ, ಇಮ್ತಿಯಾಜ್ ಬೇಗ್, ಜರಿಕಟ್ಟೆ ಹಬೀಬ್ ಸಾಬ್, **(4ನೇ ಪುಟಕ್ಕೆ)**

# ಕಣದಿಂದ ಹಿಂದಕ್ಕೆ : ಕಾಂಗ್ರೆಸ್ ಮುಖಂಡರ ಆಹ್ವಾನ ತಿರಸ್ಕಾರ

## ವಿನಯ್‌ಕುಮಾರ್ ಜೊತೆ ರೇವಣ್ಣ ನಡೆಸಿದ ಸಂಧಾನ ವಿಫಲ



ದಾವಣಗೆರೆ, ಏ. 14- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಕೈ ತಪ್ಪಿದ ಕಾರಣ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ವಿನಯ್ ಕುಮಾರ್ ಜಿ.ಬಿ ಅವರನ್ನು ಮಾಜಿ ಸಚಿವ ಹೆಚ್. ಎಂ. ರೇವಣ್ಣ ನೇತೃತ್ವದ ಕಾಂಗ್ರೆಸ್ ನಿಯೋಗವು ಭೇಟಿ ಮಾಡಿ, ಕಣದಿಂದ ಹಿಂದೆ ಸರಿಯುವಂತೆ ಮನವಿ ಮಾಡಿತಾದರೂ ವಿನಯ್ ಕುಮಾರ್ ಅವರು ನಯವಾಗಿ ತಿರಸ್ಕರಿಸಿದರು.

ಇಂದು ಬೆಳಿಗ್ಗೆ ರೇವಣ್ಣ, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಕಾಂಗ್ರೆಸ್ ಮುಖಂಡರಾದ ಎಂ.ಟಿ. ಸುಭಾಶ್ ಚಂದ್ರ, ಬಿ. ವೀರಣ್ಣ, ಹೊನ್ನಾಳಿ ಸಿದ್ದಪ್ಪ, ಯೋಗೇಶ್ ಸೇರಿದಂತೆ ಹಲವು ಮುಖಂಡರು ವಿನಯ್ ಕುಮಾರ್ ಅವರ ಜೊತೆ ಚರ್ಚೆ ನಡೆಸಿ, ನಾಮಪತ್ರ ವಾಪಸ್ ಪಡೆಯುವಂತೆ ಮನವಿ ಮಾಡಿದರೂ ವಿನಯ್ ಕುಮಾರ್ ಅವರು ನೀವು ನನ್ನನ್ನು ಮಾತನಾಡಿಸಲು ಬಂದಿದ್ದು ಖುಷಿ ವಿಚಾರ ಎಂದರು.

ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವಂತೆ ಲೋಕಸಭಾ ಕ್ಷೇತ್ರದ ಜನರು ಒತ್ತಾಯ ಮಾಡುತ್ತಿದ್ದಾರೆ. ಜನರಿಗೆ ಕೊಟ್ಟಿರುವ ಮಾತು ತಪ್ಪಲು ಇಷ್ಟವಿಲ್ಲ. ನಿಮ್ಮ ಸಲಹೆ **(2ನೇ ಪುಟಕ್ಕೆ)**

# ಜಗಳೂರು : ಬರಪೀಡಿತ ಹಣೆಪಟ್ಟಿಯಿಂದ ಹೊರತರಲು ವಿಶೇಷ ಯೋಜನೆಗೆ ಕಾಳಜಿ



**ಪ್ರಚಾರ ಕಾರ್ಯದಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ**

ಜಗಳೂರು, ಏ.14- ಜಗಳೂರು ನಂಜುಂಡಪ್ಪ ವರದಿ ಅನ್ವಯ ಅತೀ ಹಿಂದುಳಿದ ತಾಲೂಕು ಎಂದು ಗುರುತಿಸಲ್ಪಟ್ಟಿದೆ. ಇಲ್ಲಿ ಆರ್ಥಿಕ ಚಟುವಟಿಕೆ ಗರಿಗೆದರಬೇಕು. ಜನ ಲವಲವಿಕೆಯಿಂದ ಜೀವನ ನಡೆಸಬೇಕು ಎಂಬ ಉದ್ದೇಶದಿಂದ ಕ್ಷೇತ್ರವನ್ನು ಬರಪೀಡಿತ ಹಣೆ ಪಟ್ಟಿಯಿಂದ ಹೊರತರಲು ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ತಿಳಿಸಿದರು.

ಜಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುಣಬಗಟ್ಟೆ, ಕಮ್ಮತ್ತಹಳ್ಳಿ ಗ್ರಾಮಗಳಲ್ಲಿ ಮತಯಾಚನೆ ಮಾಡಿ ಮಾತನಾಡಿದ ಅವರು, ಜಗಳೂರು ವಿಧಾನಸಭಾ ಕ್ಷೇತ್ರವನ್ನು ಬರಪೀಡಿತ ಎಂಬ ಹಣೆ ಪಟ್ಟಿಯಿಂದ ಹೊರತರಲು ಪೂರಕವಾಗಿ ಕ್ಷೇತ್ರಕ್ಕೆ ವಿಶೇಷ ಯೋಜನೆಗಳನ್ನು ತರುವ ಉದ್ದೇಶ ನನಗಿದೆ. ಈ ಕುರಿತು ನಾನು ಹೆಚ್ಚಿನ ಕಾಳಜಿ ವಹಿಸುತ್ತೇನೆ ಎಂದರು.

ಜಗಳೂರು ವಿಧಾನಸಭಾ ಕ್ಷೇತ್ರ ರಾಷ್ಟ್ರೀಯ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಅಡಿ ಅತಿ ಹೆಚ್ಚಿನ ಅನುದಾನ ಬಳಸಿಕೊಂಡಿದೆ. ಹೀಗಾಗಿ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿಗಳು ಸುಧಾರಣೆ ಕಂಡಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಜಾರಿಗೊಳಿಸಿರುವ ವಿಮಾ ಯೋಜನೆಗಳು ಜನರ ಜೀವನಮಟ್ಟ ಸುಧಾರಿಸಿವೆ. ಕ್ಷೇತ್ರದಲ್ಲಿ ಗಣನೀಯವಾಗಿ ಕುಸಿದಿರುವ ಅಂತರ್ಜಲಮಟ್ಟ ಹೆಚ್ಚಿಸುವ **(4ನೇ ಪುಟಕ್ಕೆ)**

# ಹರಪನಹಳ್ಳಿ ತಾ.ನಲ್ಲಿ ಸೋಲಾರ್ ಪಾರ್ಕ್ ಸೇರಿದಂತೆ ಉದ್ಯೋಗಾವಕಾಶಕ್ಕೆ ಒತ್ತು

**ಹರಪನಹಳ್ಳಿ ಕ್ಷೇತ್ರದಲ್ಲಿ ಪ್ರಭಾ ಮಲ್ಲಿಕಾರ್ಜುನ್ ಚುನಾವಣಾ ಪ್ರಚಾರ**



ಹರಪನಹಳ್ಳಿ, ಏ. 14 - ತಾಲ್ಲೂಕಿನಲ್ಲಿ ಮಾಜಿ ಶಾಸಕ ಎಂ.ಪಿ.ರವೀಂದ್ರ ಅವರ ಕನಸಿನಂತೆ ಸೋಲಾರ್ ಪಾರ್ಕ್ ಹಾಗೂ ತಾಲ್ಲೂಕಿನ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿ ಕಡತಿ, ನಿಟ್ಟೂರು, ಹಲವಾಗಲು, ಕುಂಚೂರು, ಕೆ.ಕಲ್ಲಹಳ್ಳಿ, ನೀಲಗುಂದ, ಚಿರಸ್ತಹಳ್ಳಿ, ಗುಂಡಗತ್ತಿ, ಯಡಿಹಳ್ಳಿ, ತೆಲಗಿ ಗ್ರಾಮಗಳಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು.

ಯುವಕರಿಗೆ ಉದ್ಯೋಗಾವಕಾಶದ ಜೊತೆಗೆ ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಅನುಕೂಲಕ್ಕೆ ಗಾರ್ಮೆಂಟ್ಸ್ ಮತ್ತು ಕರಕುಶಲ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇಲ್ಲಿನ ರೈಲ್ವೆ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲಾಗುವುದು ಎಂದರು.

ಕ್ಷೇತ್ರ ವ್ಯಾಪ್ತಿಯಲ್ಲಿ ಮೆಕ್ಕೆಜೋಳ ಮತ್ತು ತರಕಾರಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದು, ರೈತರಿಗೆ ನ್ಯಾಯಯುತವಾದ ಬೆಲೆ ಸಿಗಲು ಸಂಸ್ಕರಣಾ ಘಟಕಗಳನ್ನು ಆರಂಭಿಸಲಾಗುವುದು. ಜೊತೆಗೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಬಾಗಳಿ ಮತ್ತು ನೀಲಗುಂದ ಕ್ಷೇತ್ರಗಳನ್ನು ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಶಾಸಕರಾದ ಲತಾ ಮಲ್ಲಿಕಾರ್ಜುನ್ ಮಾತನಾಡಿ, ಕ್ಷೇತ್ರಕ್ಕೆ ಕೇಂದ್ರ **(7ನೇ ಪುಟಕ್ಕೆ)**

## ಹರಪನಹಳ್ಳಿ ತಾ.ನಲ್ಲಿ ಸೋಲಾರ್ ಪಾರ್ಕ್



(5ನೇ ಪುಟದಿಂದ)
ಸರ್ಕಾರದಿಂದ ಯಾವುದೇ ಅನುದಾನ ಸಿಕ್ಕಿಲ್ಲ. ಈ ಬಗ್ಗೆ ದಾವಣಗೆರೆ ಲೋಕಸಭಾ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಗಮನ ಸೆಳೆಯಲಾಗಿದ್ದು, ಅವರು ಸಕಾರಾತ್ಮವಾಗಿ ಸ್ಪಂದಿಸಿದ್ದಾರೆ ಎಂದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಕೆ.ಕುಬೇರಪ್ಪ, ಮಲ್ಲಿಕಾರ್ಜುನ ಸ್ವಾಮಿ, ಎಲ್.ಎಂ.ನಾಯ್ಕ, ಹಾಲೇಶ್ ಗೌಡ್ರು, ಸುಷ್ಮಾ ಪಾಟೀಲ್, ಎಲ್.ಎಂ.ಹನುಮಂತಪ್ಪ, ಮಂಜಪ್ಪ ಹಲಗೇರಿ ಮತ್ತಿತರರಿದ್ದರು.

## ಪಿಯುಸಿ : ಸ್ಪಂದನಾಗೆ ಶೇ. 93 ಫಲಿತಾಂಶ



ದಾವಣಗೆರೆ, ಏ.14- ನಗರದ ಅಮೃತ ಪಿ.ಯು. ಕಾಲೇಜಿಗೆ ಪಿಯು ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದ್ದು, ವಿಜ್ಞಾನ ವಿಭಾಗದಲ್ಲಿ ಎಂ. ಸ್ಪಂದನ ಒಟ್ಟು 600 ಅಂಕಗಳಿಗೆ 558 ಅಂಕಗಳನ್ನು ಪಡೆಯುವ ಮೂಲಕ ಶೇ. 93ರಷ್ಟು ಫಲಿತಾಂಶ ಪಡೆದಿದ್ದಾರೆ. ಸ್ಪಂದನ, ಹಿರಿಯ ಪತ್ರಕರ್ತ ಪಿ.ಮಂಜುನಾಥ ಕಾಡಜ್ಜಿ ಮತ್ತು ಶ್ರೀಮತಿ ಸುನಂದ ದಂಪತಿ ಪುತ್ರಿ.

# ಅಂಬೇಡ್ಕರ್ ಸಂವಿಧಾನದಲ್ಲಿ ಸಮ ಸಮಾಜದ ದೃಷ್ಟಿಕೋನ : ಡಿಸಿ

ದಾವಣಗೆರೆ, ಏ.14 – ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಲ್ಲಿ ಸಮಾನತೆ, ಭ್ರಾತೃತ್ವದ ಪರಿಕಲ್ಪನೆಗಳು ಹಾಗೂ ಸಮ ಸಮಾಜದ ದೃಷ್ಟಿಕೋನಗಳಿವೆ. ಅಂತಹ ಆದರ್ಶ ಪುರುಷ ಹಾಕಿಕೊಟ್ಟಂತಹ ಸಿದ್ಧಾಂತಗಳನ್ನು ಪಾಲಿಸಿ ಅಸ್ಪ ಶ್ಯತೆ ವಿರೋಧಿಗಳಾಗಿ, ಸಮ ಸಮಾಜದ ನಿರ್ಮಾಣ ಮಾಡಲು ನಾವು ಕೂಡ ಕಾರಣೀಭೂತರಾಗಬೇಕಿದೆ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ, ದಾವಣಗೆರೆ ಇವರ ಸಂಯುಕ್ತಾಶ್ರ ಯದಲ್ಲಿ ತುಂಗಭದ್ರಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 133 ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರು ಚಿಕ್ಕ ವಯಸ್ಸಿನಿಂದಲೇ ಸಾಕಷ್ಟು ಕಷ್ಟ, ಅಸ್ಪ ಶ್ಯತೆ ಎದುರಿಸಿದ್ದಾರೆ. ಎಂತಹ ಕಷ್ಟಗಳೇ ಬಂದರೂ ಆತ್ಮಸ್ಥೈರ್ಯ ಕಳೆದುಕೊಳ್ಳದೇ ಸಮಾಜದಲ್ಲಿರುವ ಸಂಘರ್ಷಗಳನ್ನು ಸಮರ್ಥವಾಗಿ ಎದುರಿಸಿ ಭಾರತ ದೇಶದ ರತ್ನವಾಗಿ ಅವರು ಬೆಳೆದರು ಎಂದು ಹೇಳಿದರು.



ಅವರು ನ್ಯೂಯಾರ್ಕ್ ಕೊಲಂಬಿಯಾ ವಿಶ್ವವಿದ್ಯಾನಿ ಲಯದಲ್ಲಿ ಸಂಶೋಧನಾ ಪದವಿ ಪಡೆದು, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಪದವಿ ಪಡೆದರು. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡಿದಂತಹ ವಿದ್ಯಾರ್ಥಿಗಳಲ್ಲಿ ಇಡೀ ವಿಶ್ವದಲ್ಲಿ ಹೆಚ್ಚು ಪ್ರಭಾವ ವುಂಟು ಮಾಡಿದವರಲ್ಲಿ ಅಂಬೇಡ್ಕರ್ ಪ್ರಥಮ ಎಂದರು.

ಡಾ. ಬಿ.ಆರ್ ಅಂಬೇಡ್ಕರ್ ರವರು ಹಾಕಿಕೊಟ್ಟಂತಹ ಸಂವಿಧಾನದಿಂದ ಭಾರತ ವಿಶ್ವದಲ್ಲಿಯೇ ಒಂದು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಯಶಸ್ಸು ಕಂಡಿದೆ. ಭಾರತ ಪ್ರಜಾಪ್ರಭುತ್ವವನ್ನು ಬೇರೆ ದೇಶಗಳಿಗೂ ಕಲಿಸುತ್ತಿದೆ. ಮೇ 7ರಂದು ಲೋಕಸಭಾ ಚುನಾವಣೆ ಮತದಾನ ನಡೆಯುತ್ತಿದೆ. ಅಂಬೇಡ್ಕರ್ ಅವರ ಪರಿಶ್ರಮಕ್ಕೆ ಸಾಕಾರವಾಗಿ, 18 ವರ್ಷ ತುಂಬಿದ ಪ್ರತಿಯೊಬ್ಬರು ಅಂದು ಮತಗಟ್ಟೆಗೆ ಬಂದು ಮುಕ್ತ, ನ್ಯಾಯಸಮ್ಮತವಾಗಿ, ಮತದಾನ ಮಾಡಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಲ್ಲಿ ಸಾರ್ಥಕತೆ ಮೆರೆಯೋಣ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್ ಮಾತನಾಡಿ, ಅಂಬೇ ಡ್ಕರ್ ಅವರು ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿ, ಸಂವಿಧಾನ ಶಿಲ್ಪಿಯಾಗಿ ನಮಗೆಲ್ಲರಿಗೂ ಅಧಿಕಾರ, ಮೂಲಭೂತ ಹಕ್ಕುಗಳು, ಸಾಂವಿಧಾನಿಕ ಹಕ್ಕುಗಳು ಹಾಗೂ ಕಾನೂನಾತ್ಮಕ ಹಕ್ಕುಗಳನ್ನು ಕೊಟ್ಟಿದ್ದಾರೆ ಎಂದರು.

ಸಮ ಸಮಾಜದ ನಿರ್ಮಾಣಕ್ಕಾಗಿ ಅವರ ಕೊಡುಗೆ ಅಪಾರವಾಗಿದೆ. ಹಾಗಾಗಿ ಅವರು ಕೊಟ್ಟಿರುವಂತಹ ಎಲ್ಲಾ ತತ್ವಗಳು, ಆದರ್ಶಗಳು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ ಎಂದು ಕರೆ ನೀಡಿದರು.

ದಾವಣಗೆರೆ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಸಿ.ರಂಗಸ್ವಾಮಿ, ಅಂಬೇಡ್ಕರ್ ಅವರ ಜೀವನ ಕೆಂಡದ ಮೇಲಿನ ನಡಿಗೆಯಾಗಿತ್ತು. ಕಷ್ಟ ಹಾಗೂ ಹೋರಾಟದ ಜೀವನ ನಡೆಸುತ್ತಲೇ ಅವರು ಭಾರತದ ಕೋಟ್ಯಂತರ ಜನರಿಗೆ ಬೆಳಕಾಗುವ ಸಂವಿಧಾನ ನೀಡಿದ್ದಾರೆ ಎಂದರು.

ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಬಾನು ಎಸ್. ಬಳ್ಳಾರಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ್ ಎಂ. ಸಂತೋಷ್, ತಹಶೀಲ್ದಾರ್ ಸಿ. ಅಶ್ವತ್ಥ್, ಯೋಜನಾ ನಿರ್ದೇಶಕ ಮಹಾಂತೇಶ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಲೋಕಸಭಾ ಚುನಾವಣೆ : ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಎಸ್ಸೆಸ್ಸೆಂಗೆ ಭೋವಿ ಸಮಾಜದ ಬೆಂಬಲ



ದಾವಣಗೆರೆ, ಏ. 14 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ವ್ಯಕ್ತಪಡಿಸಿರುವ ದಾವಣಗೆರೆ ಜಿಲ್ಲಾ ಭೋವಿ ಸಮಾಜ ಇಂದು ನೂರಾರು ಸಂಖ್ಯೆಯಲ್ಲಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ನಿವಾಸಕ್ಕೆ ಆಗಮಿಸಿದ್ದರು.

ಸಮಾಜದವರನ್ನುದ್ದೇಶಿಸಿ ಮಾತನಾಡಿದ ಸಚಿವ ಮಲ್ಲಿಕಾರ್ಜುನ್, ಭೋವಿ ಸಮಾಜದವರು ಪ್ರತಿ ಚುನಾವಣೆಯಲ್ಲೂ ನಮ್ಮನ್ನು ಬೆಂಬಲಿಸುತ್ತಾ ಬಂದಿದ್ದು, ಅವರಿಗೆ ಸೂಕ್ತ ಸ್ಥಾನಮಾನ ನೀಡಲಾಗಿದೆ. ಅವಕಾಶ ಇದ್ದ ಕಡೆ ನಾವು ಅವರಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು.

ಮಾಜಿ ಸಚಿವ ಹೆಚ್.ಎಂ.ರೇವಣ್ಣ ಮಾತನಾಡಿ, ಕಾಂಗ್ರೆಸ್ ಪಕ್ಷ ಸದಾ ಶೋಷಿತ ಸಮುದಾಯದ ಜೊತೆ ಇದ್ದು, ಕಾಂಗ್ರೆಸ್ ಪಕ್ಷದಿಂದ ಇಂದು ಭೋವಿ ಸಮಾಜ ದವರಿಗೆ ಹೊಲಗಳು, ಮನೆಯಂತಹ ಆಸ್ತಿ ಜೊತೆಗೆ ಇದೀಗ ಪಂಚ ಗ್ಯಾರಂಟಿ ಸಹ ನೀಡಲಾಗುತ್ತಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಭೋವಿ ಸಮಾಜದ ಜಿಲ್ಲಾಧ್ಯಕ್ಷ ಹೆಚ್.ಜಯಣ್ಣ ಮಾತನಾಡಿ, ಭೋವಿ ಸಮಾಜದವರು ಪ್ರತಿ ಚುನಾವಣೆಯಲ್ಲೂ ಸಹ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದ್ದು, ಸಮಾಜದ ಕೆಲಸಗಳಿಗೆ ಸದಾ ಸ್ಪಂದಿಸಿದ್ದಾರೆ ಎಂದರು.

ಚನ್ನಗಿರಿಯ ಹನುಮಂತಪ್ಪ, ರಾಜಪ್ಪ, ಜಗಳೂರಿನ ಅಂಜಿನಪ್ಪ, ಹೊನ್ನಾಳಿಯ ಮಂಜಪ್ಪ ಕತ್ತಿಗಿ, ಬೆಂಕಿಕೆರೆ ಹನುಮಂತಪ್ಪ, ಅಂಜಿನಪ್ಪ, ಪುಟ್ಟಣ್ಣ, ಚಿರಡೋಣಿ ಮಂಜಪ್ಪ ಮತ್ತಿತರರು ಮಾತನಾಡಿ, ಕಾಂಗ್ರೆಸ್ ಬಡವರ ಪಕ್ಷ. ಭೋವಿ ಸಮಾಜದವರು ಸಹ ಅತಿ ಹೆಚ್ಚು ಬಡತನ ಹೊಂದಿರುವ ಜನಾಂಗ. ಈ ಜನಾಂಗದ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷ ಉಳುವವನೇ ಭೂಮಿ ಒಡೆಯ, ಇರುವವನೇ ಮನೆಯೊಡೆಯ ಸೇರಿದಂತೆ ಈಗ ಜಾರಿಗೊಳಿಸಿರುವ ಪಂಚ ಗ್ಯಾರಂಟಿಗಳು ಪೂರಕವಾಗಿವೆ ಎಂದರು.

ಇದೇ ಸಂದರ್ಭದಲ್ಲಿ ಜೆಡಿಎಸ್ ಮುಖಂಡ ಭೀಮೇಶ್, ಬಿಜೆಪಿಯ ಜಗಳೂರಿನ ಅಂಜಿನಪ್ಪ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಭೋವಿ ಸಮಾಜದ ಮುಖಂಡರುಗಳಾದ ವಕೀಲ ಗೋಪಾಲ್, ಉಮಾ ಕುಮಾರ್, ಅರ್ಜುನ್, ವೆಂಕಟೇಶ್, ಗಂಗಾಧರಪ್ಪ, ದ್ಯಾಮೇಶ್, ಶಿವರಾಜ್, ಬಸವರಾಜಪ್ಪ, ತಿರ್ಲಪ್ಪ, ರಾಜಪ್ಪ, ರಾಜು ಗರಗ, ಹಾಲೇಶ್, ವಸಂತಕುಮಾರಿ, ಮಹೇಶ್, ವೀರಭದ್ರಪ್ಪ, ಡಾ. ರೇವಣಸಿದ್ದಪ್ಪ ಶಿವನಹಳ್ಳಿ, ಭೋವಿ ಕುಮಾರ್, ತಿಪ್ಪೇಸ್ವಾಮಿ, ಜಯಪ್ಪ, ಈರಪ್ಪ ಮತ್ತಿತರರಿದ್ದರು.

## 2 ಲಕ್ಷದ ಒಂದು ರೂ.ಗೆ ನಿಶಾನೆ ಪಡೆದ ದೇವರಮುನಿ ಶಿವಕುಮಾರ್



ದಾವಣಗೆರೆ, ಏ. 14 - ನಗರದ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಯ 101ನೇ ರಥೋತ್ಸವದಲ್ಲಿ 2 ಲಕ್ಷದ ಒಂದು ರೂಪಾಯಿಗೆ ಶ್ರೀ ಸ್ವಾಮಿಯ ನಿಶಾನೆಯನ್ನು ದಾವಣಗೆರೆ-ಹರಿಹರ ನಗರಾಭಿ ವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ದೇವರಮುನಿ ಶಿವಕುಮಾರ್ ಅವರು ಪಡೆದುಕೊಂಡರು. ಈ ಸಂದರ್ಭ ದಲ್ಲಿ ಜಯದೇವ ಎಸ್. ದೇವರಮನಿ, ಬಕ್ಕೇಶ್ ಎಂ. ದೇವರಮನಿ ಮತ್ತು ಶ್ರೀಮತಿ ಅನಿತಾ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಒಂದು ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಎ.ಹೆಚ್. ಶಿವಪ್ಪಯ್ಯ ಮತ್ತು ಮರಿ ಮೊಮಕ್ಕಳಾದ ಎ.ಹೆಚ್. ಸಂತೋಷ್, ಎ.ಹೆಚ್. ಸಂದೇಶ್, ದಿ. ಪ್ರಶಾಂತ್ ಅವರ ಸ್ಮರಣಾರ್ಥ ಸಣ್ಣಪ್ಪ ಹಾಗೂ ದಿ. ಎನ್.ಪಿ. ಚಂದ್ರಶೇಖರ್ ಅವರ ಸ್ಮರಣಾರ್ಥ ಶ್ರೀಮತಿ ಸರೋಜಮ್ಮ ಅವರು ಇಂದಿನ ದಾನಿಗಳಾಗಿದ್ದಾರೆ.

ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

## ನಗರದಲ್ಲಿಂದು ಫ್ರೆಗ್ಮೆಂಟ್ಸ್ ಆಫ್ ಇಲ್ಯೂಷನ್

ದೃಶ್ಯಕಲಾ ಮಹಾವಿದ್ಯಾಲಯದ ವಜ್ರಮಹೋತ್ಸವದ ಅಂಗವಾಗಿ ಅನಿಮೇಷನ್ ಮತ್ತು ಮಲ್ಟಿಮೀಡಿಯಾ ವಿಭಾಗದ ವತಿಯಿಂದ ವಿಶ್ವ ದೃಶ್ಯಕಲಾ ಗ್ಯಾಲರಿಯಲ್ಲಿ ಇಂದು ಬೆಳಗ್ಗೆ 11 ಗಂಟೆಗೆ 'ಫ್ರೆಗ್ಮೆಂಟ್ಸ್ ಆಫ್ ಇಲ್ಯೂಷನ್' ಕಾರ್ಯಕ್ರಮ ನಡೆಯಲಿದೆ.

ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವ ಡಾ. ಯು.ಎಸ್. ಮಹಾಬಲೇಶ್ವರ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ, ಡಾ. ಜೈರಾಜ್ ಎಂ. ಚಿಕ್ಕಪಾಟೀಲ, ಡಾ. ಸತೀಶ್ ಕುಮಾರ್ ಪಿ. ವಲ್ಲೇಪುರೆ, ರಂಗನಾಥ್ ಬಿ. ಕುಲಕರ್ಣಿ, ಆರ್. ಅರುಣ ಕಾರ್ಯಕ್ರಮದಲ್ಲಿ ಭಾಗವಹಿಸುವರು.

## ನಾಗರಸನಹಳ್ಳಿಯಲ್ಲಿ ನಾಳೆ ಶ್ರೀ ವೀರಭದ್ರೇಶ್ವರಸ್ವಾಮಿ ಜಾತ್ರೆ



ದಾವಣಗೆರೆ, ಏ.14- ತಾಲ್ಲೂಕಿನ ನಾಗರಸನಹಳ್ಳಿಯ ಶ್ರೀ ವೀರಭದ್ರೇಶ್ವರಸ್ವಾಮಿ ಜಾತ್ರಾ ಮಹೋತ್ಸವವು ನಾಡಿದ್ದು ದಿನಾಂಕ 16, 17 ಮತ್ತು 18 ರಂದು ನಡೆಯಲಿದೆ.

ನಾದಿದ್ದು ದಿನಾಂಕ 16ರ ಮಂಗಳವಾರ ಬೆಳಿಗ್ಗೆ 5 ಗಂಟೆಗೆ ಶ್ರೀ ಸ್ವಾಮಿಗೆ ಮಹಾರುದ್ರಾಭಿಷೇಕ, ಸಂಜೆ ಮುತ್ತೇನಹಳ್ಳಿ ಶ್ರೀ ದುರ್ಗಾಂಭಿಕಾದೇವಿ ಮತ್ತು ಶ್ರೀ ವೀರಭದ್ರೇಶ್ವರ ಸ್ವಾಮಿಯನ್ನು ಗ್ರಾಮಕ್ಕೆ ಬರಮಾಡಿಕೊಳ್ಳುವುದು. ರಾತ್ರಿ 9 ಗಂಟೆಗೆ ಹೂವಿನ ಪಲ್ಲಕ್ಕಿ ಮೆರವಣಿಗೆ ಜರುಗುವುದು.

ದಿನಾಂಕ 17ರ ಬುಧವಾರ ಬೆಳಿಗ್ಗೆ 10.30 ರಿಂದ 12 ಗಂಟೆಯವರೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ, ಉಚ್ಛಾಯ, ಕೆಂಡದಾರ್ಚನೆ, ದಿನಾಂಕ 18ರ ಗುರುವಾರ ಸಂಜೆ 4 ಗಂಟೆಯಿಂದ ಶ್ರೀ ವೀರಭದ್ರೇಶ್ವರ ಸ್ವಾಮಿಯ ಮಹಾರಥೋತ್ಸವ ಜರುಗಲಿದೆ.

## ಮತದಾನ ಬಹಿಷ್ಕಾರದ ಎಚ್ಚರಿಕೆ ಸಮರ್ಥ ಶಾಮನೂರು ಮನವೊಲಿಕೆ

ದಾವಣಗೆರೆ, ಏ. 14- ನಗರದ ಮಹಾಲಕ್ಷ್ಮಿ ಲೇಔಟ್ ಮೂಲಭೂತ ಸೌಲಭ್ಯ ವಂಚಿತವಾಗಿದೆ ಎಂದು ಆರೋಪಿಸಿ ಮತದಾನ ಬಹಿಷ್ಕಾರ ಮಾಡುವ ಎಚ್ಚರಿಕೆ ನೀಡಿದ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ ಶಾಮನೂರು ಇಂದು 44ನೇ ವಾರ್ಡಿನ ಮಹಾಲಕ್ಷ್ಮಿ ಬಡಾವಣೆ ನಾಗರಿಕರ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳು ಹಾಗೂ ಸಾರ್ವಜನಿಕರನ್ನು ಭೇಟಿ ಮಾಡಿ ಮನವೊಲಿಸಿದರು.

ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಸಮರ್ಥ ಅವರು, ಮತದಾನ ನಮ್ಮ ಹಕ್ಕು, ಅಂಬೇಡ್ಕರ್ ಜಯಂತಿ ದಿನದಂದು ಸಂವಿಧಾನದ ಪ್ರಥಮ ಹಕ್ಕು ಮತದಾನವನ್ನು ಬಹಿಷ್ಕರಿಸಿ ಅವಮಾನ ಮಾಡುವುದು ಸರಿಯಲ್ಲ. ನಿಮ್ಮ ಕುಂದು ಕೊರತೆಗಳನ್ನು ಈಗಾಗಲೇ ಸಚಿವರ ಗಮನಕ್ಕೆ ತರಲಾಗಿದ್ದು, ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಶುರು ಮಾಡಿದ್ದಾರೆ, ಹಾಗಾಗಿ ಆತಂಕ ಪಡುವ ಅಗತ್ಯವಿಲ್ಲ. ಸಾರ್ವಜನಿಕರು ಬೇಸರವಾಗದೇ ಮತದಾನ ಮಾಡಲು ಮುಂದಾಗಿ ಎಂದು ಮನವಿ ಮಾಡಿದರು.

ಪ್ರತಿಭಟನಾನಿರತ ಸಾರ್ವಜನಿಕರು ಸಮರ್ಥ್ ಶಾಮನೂರು ಅವರ ಮಾತಿಗೆ ಓಗೊಟ್ಟು ಮತದಾನ ಬಹಿಷ್ಕಾರ ಹಿಂಪಡೆಯಲು ಮುಂದಾದರು.



## ಗೊಲ್ಲರಹಳ್ಳಿಯಲ್ಲಿ ನಾಡಿದ್ದು ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಬ್ರಹ್ಮರಥೋತ್ಸವ



ದಾವಣಗೆರೆ, ಏ. 14 - ತಾಲ್ಲೂಕಿನ ಗೊ ಲ್ಲ ರ ಹ ಳ್ಳಿ ಗ್ರಾಮದಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇ ವ ಸ್ಥಾ ನ ದ ಲ್ಲಿ ವೆ ಂ ಕ ಟೇ ಶ್ವ ರ ಸ್ವಾಮಿಯ ಬ್ರಹ್ಮ ರಥೋತ್ಸವ ಇದೇ ದಿನಾಂಕ 17 ರಂದು ಸಂಜೆ 4ಕ್ಕೆ ಜರುಗಲಿದೆ.

ನಾಳೆ ದಿನಾಂಕ 15ರ ಸೋಮವಾರ ಸಂಜೆ 6ಕ್ಕೆ ಗಣಪತಿ ಕುಂಕುಮಾರ್ಚನೆ, ಪಂಚಾಮೃತ ಅಭಿಷೇಕ, ರಾತ್ರಿ 7.15ಕ್ಕೆ ಕಂಕಣ ಧಾರಣೆ, ಗಜೋತ್ಸವ, ಬನ್ನಿ ಪೂಜೆ ನಡೆಯಲಿವೆ. ದಿನಾಂಕ 16ರಂದು ಸಂಜೆ 6ಕ್ಕೆ ಸರ್ಪೋತ್ಸವ ಪೂಜೆ, ಬನ್ನಿ ಪೂಜೆ ಹಾಗೂ ಗಂಗಾಪೂಜೆ ನಡೆಯಲಿವೆ. ದಿನಾಂಕ 17 ರಂದು ಬೆಳಿಗ್ಗೆ 11.15ಕ್ಕೆ ರಥಕ್ಕೆ ಕಳಸ ಪ್ರತಿಷ್ಠಾಪನೆ, ರಥಕ್ಕೆ ಅರಿಶಿನ ಸೇವೆ ಹಾಗೂ ಕುಂಕುಮ ಪೂಜೆ ನಡೆಯಲಿವೆ. ಬೆಳಿಗ್ಗೆ 11.45 ಕ್ಕೆ ತಿರುಪತಿ ಮಾದರಿಯಲ್ಲಿ ಅನ್ನ ಸಂತರ್ಪಣೆ, ಸಂಜೆ 4ಕ್ಕೆ ಸ್ವಾಮಿ ರಥೋತ್ಸವ ನಡೆಯಲಿದೆ. ದಿನಾಂಕ 18 ರಂದು ಬೆಳಗ್ಗೆ ಓಕುಳಿ ಕಾರ್ಯಕ್ರಮ, ಬನ್ನಿ ಪೂಜೆ ನಡೆಯಲಿದೆ.

## ಚುನಾವಣಾ ವೇಳೆ ಸರ್ವಾಧಿಕಾರಿಯಂತೆ ರಾಜ್ಯಕ್ಕೆ ಬರುವ ಮೋದಿ: ಡಿಬಿ ಆರೋಪ



ದಾವಣಗೆರೆ, ಏ. 14 - ಕರ್ನಾಟಕದ ಜನತೆ ಅತಿವೃಷ್ಟಿ, ಅನಾವೃಷ್ಟಿಯಿಂದ ನಲುಗಿ ಹೋದಾಗ ರಾಜ್ಯಕ್ಕೆ ಒಮ್ಮೆಯೂ ಭೇಟಿ ನೀಡಿ ಜನರ ಸಂಕಷ್ಟ ಆಲಿಸದ ಪ್ರಧಾನಿ ಮೋದಿ ಅವರು, ಚುನಾವಣೆ ಬಂದಾಗ ಮಾತ್ರ ಹಿಂದೆ ರಾಜರುಗಳು ಬೇರೆ ರಾಜ್ಯಗಳ ಮೇಲೆ ದಾಳಿ ನಡೆಸುತ್ತಿದ್ದಂತೆ, ಈಗ ರಾಜ್ಯಕ್ಕೆ ಮತ ಭಿಕ್ಷೆಗಾಗಿ ದಂಡೆತ್ತಿ ಬರುತ್ತಿದ್ದಾರೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಆರೋಪಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡಿಗರ ತೆರಿಗೆ ಪಾಲು ನೀಡದೆಯೇ ರಾಜ್ಯಕ್ಕೆ ಕೇವಲ ಮತ ಬೇಟೆಗೆ ಬರುವ ನರೇಂದ್ರ ಮೋದಿ ಅವರಿಗೆ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪ್ರಬುದ್ಧ ಮತದಾರರು ಮಂಗಳಾರತಿ ಮಾಡಿದಂತೆ ಈ ಬಾರಿಯೂ ಮಾಡಲಿದ್ದಾರೆ ಎಂದರು. ಚುನಾವಣೆಯನ್ನು ನೇರವಾಗಿ ಎದುರಿಸಲಾಗದ ನರೇಂದ್ರ ಮೋದಿ ಇಡಿ, ಐಟಿ, ಸಿಬಿಐ ಸೇರಿದಂತೆ ಇತರೆ ಸ್ವಾಯತ್ತ ಸಂಸ್ಥೆಗಳನ್ನು ಬಳಕೆ ಮಾಡಿಕೊಂಡು ವಿರೋಧ ಪಕ್ಷಗಳ ನಾಯಕರನ್ನು ಬಂಧಿಸುವ ಮೂಲಕ ಸೇಡಿನ ರಾಜಕಾರಣ ನಡೆಸುತ್ತಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಬಿ.ಎಚ್. ಉದಯಕುಮಾರ್, ಡಿ. ಶಿವಕುಮಾರ್. ಎಂ.ಕೆ. ಲಿಯಾಖತ್ ಅಲಿ, ಡಿ.ಎಸ್. ಸುರೇಶ್, ಮುಬಾರಕ್ ಇದ್ದರು.

## ಇಂದು ಕುರಿ, ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಇಂದು ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ಮೂಲಭೂತ ಸೌಲಭ್ಯ ವಂಚಿತ : ಚುನಾವಣೆ ಬಹಿಷ್ಕಾರದ ಎಚ್ಚರಿಕೆ

ದಾವಣಗೆರೆ, ಏ. 14- ಮೂಲಭೂತ ಸೌಲಭ್ಯಗಳ ಬೇಡಿಕೆಗೆ ಇದುವರೆಗೂ ಯಾವ ಪಕ್ಷದ ಜನಪ್ರತಿನಿಧಿಗಳು ಸ್ಪಂದಿಸದೇ ಇರುವ ಕಾರಣ ಮೇ 7 ರಂದು ನಡೆಯುವ ಲೋಕಸಭಾ ಚುನಾವಣೆಯನ್ನು ಬಹಿಷ್ಕರಿಸುವುದಾಗಿ ನಗರದ ಕುಂದುವಾಡ ರಸ್ತೆಯ ಸಮೀಪದ ಮಹಾಲಕ್ಷ್ಮಿ ಬಡಾವಣೆ ನಾಗರಿಕರು ಎಚ್ಚರಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಲಕ್ಷ್ಮಿ ಬಡಾವಣೆ ನಾಗರಿಕ ಹಿತರಕ್ಷಣಾ ವೇದಿಕೆಯ ಪದಾಧಿಕಾರಿಗಳಾದ ಪ್ರಸನ್ನಕುಮಾರ್ ಅವರು, ಬಡಾವಣೆ ನಿರ್ಮಾಣವಾದ ನಂತರದ ದಿನಗಳಲ್ಲಿ ನಾಗರಿಕರಿಗೆ ಬೇಕಾದ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ ಎಂದರು.

ಸಮಸ್ಯೆಗಳ ಬಗ್ಗೆ ಸಚಿವರು, ಶಾಸಕರು, ಜಿಲ್ಲಾಡಳಿತ, ಮಹಾನಗರ ಪಾಲಿಕೆ, ದೂಡಾ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜವಾಗಿಲ್ಲ. ಹಾಗಾಗಿ ಈ ಬಾರಿಯ ಲೋಕಸಭಾ ಚುನಾವಣೆಯನ್ನು ಬಹಿಷ್ಕರಿಸುವ ನಿರ್ಧಾರಕ್ಕೆ ಬರಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ನಾಗರಿಕ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳಾದ ಕೆ.ಪಿ. ಚಂದ್ರಶೇಖರ್, ಎಸ್. ಕುಲಕರ್ಣಿ, ಪಿ.ಬಿ. ಶಿವಕುಮಾರ್, ಮೌನೇಶ್ವರ, ರವಿಕುಮಾರ್, ಹೆಚ್. ಗುರುಮೂರ್ತಿ, ಹಿತೇಷ್ ಕುಮಾರ್ ವಿ. ಪಾಟೀಲ್, ಸಮೀವುಲ್ಲಾ, ಎಸ್.ಎಂ. ವೆಂಕಟೇಶ್, ಅಶೋಕಶೆಟ್ಟಿ, ಟಿ.ಎಂ. ಕಾಶೀನಾಥ್, ಕೆ.ಎನ್. ಮಹೇಶ್, ಕೃಷ್ಣಾಜಿ, ಚಂದ್ರಶೇಖರ್ ಮತ್ತಿತರರಿದ್ದರು.

## ನಗರಕ್ಕೆ ಇಂದು ಸಲೀಂ ಅಹಮದ್



ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಅವರ ಪರ ಕರ್ನಾಟಕ ಸರ್ಕಾರದ ವಿಧಾನ ಪರಿಷತ್ ನ ಸರ್ಕಾರಿ ಮುಖ್ಯ ಸಚೇತಕರು ಹಾಗೂ ಕೆಪಿಸಿಸಿ ನಿಕಟಪೂರ್ವ ಮಾಜಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಅವರು ಇಂದು ಮಧ್ಯಾಹ್ನ 3 ಗಂಟೆಗೆ ಶ್ರೀ ಕಲ್ಲೇಶ್ವರ ರೈಸ್ ಮಿಲ್ ನಲ್ಲಿ 14ನೇ ವಾರ್ಡ್ ನ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸುವರು.

ಸಭೆಯಲ್ಲಿ ಸ್ಥಳೀಯ ಮಹಾನಗರ ಪಾಲಿಕೆ ಸದಸ್ಯ ಕೆ. ಚಮನ್ ಸಾಬ್, ದಕ್ಷಿಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಇತರೆ ಕಾಂಗ್ರೆಸ್ ಮುಖಂಡರುಗಳು ಪಾಲ್ಗೊಳ್ಳುವರು.

HOSTEL FOR RENT
NEAR BAKKESHWARA CHOULTRY. S.N. LAYOUT
CONTACT
9535114063, 96203 71544
97428 35642

## ವಿಜೃಂಭಣೆಯ ಲಕ್ಷ್ಮೀ ಮಾಧವ ರಂಗನಾಥ ಸ್ವಾಮಿ ಮಹಾ ರಥೋತ್ಸವ

ಹೊನ್ನಾಳಿ, ಏ.14- ತಾಲ್ಲೂಕಿನ ಹಳೆದೇವರ ಹೊನ್ನಾಳಿ ಗ್ರಾಮ ದೇವರಾದ ಶ್ರೀ ಲಕ್ಷ್ಮೀಮಾಧವ ರಂಗನಾಥಸ್ವಾಮಿ ಮಹಾರಥೋತ್ಸವವು ಭಾನುವಾರ ಬೆಳಿಗಿನ ಜಾವ ಬೆಳಗ್ಗೆ 5.30 ರ ಬ್ರಾಹ್ಮೀ ಮುಹೂರ್ತದಲ್ಲಿ ಭಕ್ತ ಸಮೂಹದೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಕೃತಂತ್ರತಾ, ದ್ವಾಪರ ಕಲಿಯುಗದಲ್ಲಿ ಶ್ರೀರಂಗನಾಥಸ್ವಾಮಿ ಧರ್ಮ ಸ್ಥಾಪನೆಗಾಗಿ ದಶಾವತಾರಗಳಲ್ಲಿ ಸ್ವಾಮಿ ಮಹಿಮಂಡಲಕ್ಕೆ ಪ್ರಾಶಯವಾದ ಶ್ರೀ ಭರತ ಖಂಡದ ಹೆಮ್ಮೆ ಭೂಭಾಗದ ತಾಲ್ಲೂಕಿನ ಹಳೆದೇವರ ಹೊನ್ನಾಳಿ ಗ್ರಾಮ ತುಂಗಭದ್ರಾ ನದಿದಡದಲ್ಲಿರುವ ಈ ಗ್ರಾಮ ದೇವರಾದ ವೀರಾಜಮಾನರಾಗಿ ಶ್ರೀಲಕ್ಷ್ಮೀ ಮಾಧವ ರಂಗನಾಥಸ್ವಾಮಿ ಚಂದ್ರದರ್ಶನ ನಂತರ ಕಂಕಣಧಾರಣೆ ಕಾರ್ಯಕ್ರಮ ನೆರವೇರಿತು.



ನಂತರ ರಥಕ್ಕೆ ವಿವಿಧ ಬಣ್ಣದ ಬಾವುಟಗಳು ಮತ್ತು ಹೂವುಗಳಿಂದ ಅಲಂಕಾರಗೊಂಡಿದ್ದ ರಥದಲ್ಲಿ ದೇವರನ್ನಿಟ್ಟು ರಥಕ್ಕೆ ಶಾಂತಿ ಪೂಜೆ ನಡೆಸಿ, ಅರ್ಚಕರಿಂದ ರಥಕ್ಕೆ ಪೂಜೆ ಮಾಡಿದ ನಂತರ ರಥವನ್ನು ಭಕ್ತ ಸಮೂಹ ಎಳೆದ ತಮ್ಮ ಭಕ್ತಿ ಸರ್ಮಪಿಸಿದರು.



ಕೆಲ ಭಕ್ತರು ರಥದ ಮೇಲೆ ಬಾಳೆಹಣ್ಣು, ಕಾಳುಮೆಣಸು, ಮಂಡಕ್ಕಿ ಮತ್ತಿತರ ವಸ್ತುಗಳನ್ನು ತೂರುತ್ತಾ ಭಕ್ತರು ತಮ್ಮ ಭಕ್ತಿ ಸಮರ್ಪಿಸಿದರು.

ಹೊನ್ನಾಳಿ

ರಥದ ಗಾಲಿಗಳಿಗೆ ತೆಂಗಿನ ಕಾಯಿ ಒಡೆದು, ಬಾಳೆಹಣ್ಣು ನೈವೇದ್ಯ ಮಾಡಿ ಕೃತಾರ್ಥರಾದರು. ನಿನ್ನೆ ದೂಳೆ ಉತ್ಸವ ನಡೆಯಿತು. ಭಾನುವಾರ ಬೆಳಿಗ್ಗೆ ಕುದುರೆ ಉತ್ಸವ ಹಾಗೂ ಗಜ ಉತ್ಸವ ದಾರ್ಮಿಕ ವಿಧಿ ವಿಧಾನಗಳ ಮೂಲಕ ನಡೆದವು. ಮಧ್ಯಾಹ್ನ ಓಕುಳಿ, ರಂಗದಾಟ, ಭೂತನಾಥನ ಬಾಳೆಹಣ್ಣಿನ ಸೇವೆ ವಿವಿಧ ವಾದ್ಯಗಳ ಮೂಲಕ ಅದ್ದೂರಿಯಾಗಿ ನಡೆಯಿತು.

ಎತ್ತಿನ ಬಂಡಿಯನ್ನು ಮತ್ತು ಎತ್ತುಗಳನ್ನು ಶೃಂಗರಿಸಿ, ಬಂಡಿಯನ್ನು ಗ್ರಾಮದ ರಾಜ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಬೆಲ್ಲದ ನೀರನ್ನು ಬಂದಂತಹ ಭಕ್ತರಿಗೆ ವಿತರಿಸುವ ಕಾರ್ಯ ನಡೆಯಿತು.

SSIMS SPARSH
CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ
ದಿನಾಂಕ: ಮಂಗಳವಾರ, 16ನೇ ಏಪ್ರಿಲ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090 / 99800 33277
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

